

ಸ್ಥಿತಪ್ರಜ್ಞ ಶ್ರೀ ಚನ್ನಬಸವದೇವರು

ಸ್ಥಿತಪ್ರಜ್ಞ

ಶ್ರೀ ಚನ್ನಬಸವದೇವರು

ಕಾದರವಳ್ಳಿಯ ಶ್ರೀ ಸೀಮೀಮಠದ ಪರಮ ಪೂಜ್ಯ ಶ್ರೋತ್ರಿಯ ಬ್ರಹ್ಮನಿಷ್ಠ

ಸದ್ಗುರು ಶ್ರೀ ಅಪ್ಪಯ್ಯಸ್ವಾಮಿಗಳವರ ಕರಕಮಲ ಸಂಜಾತರಾದ

ಶ್ರೀ ಚನ್ನಬಸಪ್ಪ,ಕಲ್ಲಪ್ಪ, ಇಂಚಲ ಇವರ

ಆಧ್ಯಾತ್ಮಿಕ ಸಾಧನೆಯ ಜೀವನಗಾಥೆ

ಲೇ : ಸದಾನಂದ

ಶ್ರೀ ಸಿದ್ಧಾಶ್ರಮ.,

ಶ್ರೀ ರೇವಣ ಸಿದ್ಧೇಶ್ವರ ಕ್ಷೇತ್ರ.

ಹುಣಸೇವಾರಿ-ಕಾಕತಿ-ಬೆಳಗಾಂವಿ.

ಅರಿಕೆ

ಪರಮಪೂಜ್ಯ ಶ್ರೋತ್ರಿಯ-ಬ್ರಹ್ಮನಿಷ್ಠ ಸದ್ಗುರು ಶ್ರೀ ಅಪ್ಪಯ್ಯ ಸ್ವಾಮಿಗಳವರ, ಕರಕಮಲ ಸಂಜಾತರಾದ ಶ್ರೀ ಚನ್ನಬಸಪ್ಪ,ಕಲ್ಲಪ್ಪ,ಇಂಚಲ ಸಾ|| ಹುಣಸಿಕಟ್ಟಿ-ತಾ||ಬೈಲಹೊಂಗಲ, ಜಿ|| ಬೆಳಗಾಂವಿ ಇವರ, ಅರ್ಥಾತ್ ನಮ್ಮ ಅಪ್ಪಾಜಿಯವರ ಜೀವನ ಚರಿತ್ರೆ, ಇದು ಅಲ್ಲ. ಇದು ಕೇವಲ ಅಪ್ಪಾಜಿಯವರ ಆಧ್ಯಾತ್ಮಿಕ ನಿಲುವನ್ನು ಪರಿಚಯಿಸುವ ಕಿರು ಪ್ರಯತ್ನ. ಆದ್ದರಿಂದ ನಮ್ಮ ಕುಟುಂಬದ ಯಾವುದೇ ವ್ಯಕ್ತಿ-ಸನ್ನಿವೇಶಗಳು ಈ ಲೇಖನದಲ್ಲಿ ನುಸುಳಿಲ್ಲ. ಅಪ್ಪಾಜಿಯವರ ಆಧ್ಯಾತ್ಮಿಕ ನಿಲುವು, ಅವರ ಪಾರಮಾರ್ಥಿಕ ವೈಭವವನ್ನು ಮಾತ್ರ, ನನ್ನ ಬುದ್ಧಿಗೆ ನಿಲುಕಿದಷ್ಟು ವಿವರಿಸಿರುವೆ. ಅಪ್ಪಾಜಿಯವರ ನಿಜ ಮಹಿಮೆಯನ್ನು ವಿವರಿಸಲು ನಾನು-ನನ್ನ ಬುದ್ಧಿ ಅಸಮರ್ಥ. ನನ್ನ ಬುದ್ಧಿಯಾದರು ಎಷ್ಟರದು? ಕಲುಕಾದ ನೀರಿನಲ್ಲಿ ಬಿದ್ದಿರುವ ಸೂರ್ಯನ ಪ್ರತಿಬಿಂಬವಿದು. ಕಲುಕಾದ ನೀರು-ಅದರಲ್ಲಿ ಬಿದ್ದ ಪ್ರತಿಬಿಂಬವು, ಆಗಸದಲ್ಲಿನ ಸೂರ್ಯನ ಸಂಪೂರ್ಣ ಪರಿಚಯವನ್ನು ಮಾಡಿ ಕೊಡಲಾರದು. ಅದು ಮಸುಕುಮಸುಕಾಗಿ ಸೂರ್ಯನನ್ನು ಪ್ರತಿಬಿಂಬಿಸುವಂತೆ, ನಾನು ಅಪ್ಪಾಜಿಯವರನ್ನು ಅಸ್ಪಷ್ಟವಾಗಿ ಕಂಡು, ಅವರನ್ನು ಅಸಮರ್ಪಕವಾಗಿ ಪರಿಚಯಿಸಿರುವೆ, ದಯವಿಟ್ಟು ಕ್ಷಮಿಸಿ

ಸದಾನಂದ. ಚನಬಸಪ್ಪಾ. ಇಂಚಲ.

೧-೬-೨೦೦೧

ಜೀವನ್ಮುಕ್ತ ವರಿಷ್ಠಾಯ

ಸ್ಥಿತಪ್ರಜ್ಞ ಸ್ವರೂಪಿಣೇ

ನಾಮ್ನಾ ಚೆನ್ನಬಸವಾಯ

ಪಿತೃದೇವಾಯ ತೇ ನಮಃ

ಪಾರ್ಥ! ನೈವೇಹ ನಾಮುತ್ರ

ವಿನಾಶಸ್ತಸ್ಯ ವಿದ್ಯತೇ।

ನ ಹಿ ಕಲ್ಯಾಣಕೃತ್ ಕಶ್ಚಿತ್

ದುರ್ಗತಿಂ ತಾತ ಗಚ್ಛತಿ॥

ಗೀತಾ–೬–೪೦.,

ಹೇ ಪಾರ್ಥಾ!

ಯೋಗಭ್ರಷ್ಟ ಪುರುಷನಿಗೆ

ಇಹ–ಪರಗಳೆರಡರಲ್ಲಿಯೂ

ಕೆಡುಕೆಂಬುದು ಇಲ್ಲ.

ಕಲ್ಯಾಣ ಕಾರ್ಯದಲ್ಲಿ ತೊಡಗಿದ

ಯಾರಿಗೂ

ದುರ್ಗತಿ ಪ್ರಾಪ್ತವಾಗಲಾರದು.

ಯೋಗಭ್ರಷ್ಟೋಽಭಿಜಾಯತೇ

"ಶರಣರ ಮಹಿಮೆಯನ್ನು ಮರಣದಲ್ಲಿ ನೋಡು," "ಶೂರ ಓಳಖಾವಾ ರಣೇ।ಸಾಧೂ ಓಳಖಾವಾ ಮರಣೇ॥" ಎಂಬ ನಾಣ್ನುಡಿಗಳಿವೆ. ಅನುಕ್ಷಣದ ಜೀವನದಲ್ಲಿ ಆ ಮಹಿಮೆ ಎದ್ದು ತೋರುತ್ತಿದ್ದು; 'ಇವನು ಶೂರ', 'ಇವನು ಶರಣ' ಎಂದು ಗುರುತಿಸುವ ಯೋಗ್ಯತೆ ಇಲ್ಲದ ಜನರಿಗೆ ಹೇಳಿದ ಮಾತಿದು. ಶರಣ ಈ ಪ್ರಪಂಚದಲ್ಲಿ ಸಾಮಾನ್ಯ ರೀತಿಯಲ್ಲಿ ಸಾಮಾನ್ಯ ಜೀವಿಯಂತೇ ಜೀವಿಸುತ್ತಿದ್ದರೂ, ಅಸಾಮಾನ್ಯ ಪೂರ್ಣತ್ವದ ಇರುವಿಕೆ ಅವನ ಅನುಕ್ಷಣದ ಜೀವನದಲ್ಲಿ, ಪ್ರತಿಯೊಂದು ವ್ಯವಹಾರದಲ್ಲಿ ಪ್ರಕಟವಾಗುತ್ತಲೇ ಇರುತ್ತದೆ. ಜ್ಞಾನ, ನಿಷ್ಕಾಮತೆ, ಸಮತೆ, ಆಂತರಿಕ ಸ್ವಯಂಸ್ಥಿತ ಶಾಂತಿ, ತ್ರಿಗುಣಗಳ ವ್ಯಾಪಾರದ ಗೊಂದಲದ ಜಾಲದಿಂದ ಬಿಡುಗಡೆ, ಅವುಗಳ ಬಲೆಯಲ್ಲಿ ಸಿಲುಕದೇ ಅವನ್ನು ಮೀರಿ ಸಾಕ್ಷಿಯಾಗಿರುವುದು ಇವೆಲ್ಲ ಮುಕ್ತ ಪುರುಷನ ಲಕ್ಷಣಗಳಾದ್ದರಿಂದ, ಇವೆಲ್ಲ ಲಕ್ಷಣಗಳು ಅವನ ಸಮಸ್ತ ವ್ಯವಹಾರದಲ್ಲಿ ವ್ಯಕ್ತವಾಗಲೇ ಬೇಕು, ವ್ಯಕ್ತವಾಗುತ್ತಲೇ ಇರುತ್ತವೆ. ಆದರೆ ಹುಲುಮಾನವನು ಈ ಲಕ್ಷಣಗಳನ್ನು ಕಂಡು 'ಇವನು ಮುಕ್ತ'ನೆಂದು, ಮುಕ್ತಪುರುಷನನ್ನು ಗುರುತಿಸಿಯಾನೇ? ಆಡಂಬರದ ವೈಭವಕ್ಕೆ ಮರುಳಾಗಿ ಇನ್ನಾರನ್ನೋ ಮುಕ್ತನೆನ್ನಬಹುದೇ ಹೊರತು ನಿರಾಭಾರಿ, ಅಮಾನಿತ್ವ ಮುಕ್ತಪುರುಷನನ್ನು ಆತ ಗುರುತಿಸಲಾರ.

ದೇಹಪಾತದ ಕಾಲದಲ್ಲಿಯೇ ಅಪ್ಪಾಜಿಯವರ ಮಹಿಮೆ ಮುಮುಕ್ಷು ವೃಂದಕ್ಕೆ ಕಾಣಿಸಿತು. ಅಪ್ಪಾಜಿಯವರ ಹೆಸರು ಚನ್ನಬಸವ. ಕಲ್ಲಪ್ಪ. ಇಂಚಲ. ಹುಟ್ಟಿದ್ದು ೧೮.೦೩.೧೯೩೯ ಬೈಲಹೊಂಗಲ ತಾಲೂಕಿನ ಹುಣಶೀಕಟ್ಟಿ ಗ್ರಾಮದಲ್ಲಿ–ಕಾದ್ರೊಳ್ಳಿಯ ಪಕ್ಕದ ಗ್ರಾಮ. ಅಪ್ಪಾಜಿಯವರು ಕಾದ್ರೊಳ್ಳಿ ಶ್ರೀಗಳವರ ಸಂಪರ್ಕದಲ್ಲಿ ಇದ್ದದ್ದು, ಈ ಜನ್ಮದಲ್ಲಿ ಕೇವಲ ಒಂದೂವರೆ–ಎರಡು ವರ್ಷಗಳು ಮಾತ್ರ. ಶ್ರೀ ಚನ್ನಬಸವದೇವರು (ಅಪ್ಪಾಜಿಯವರನ್ನು ಇನ್ನು ಮುಂದೆ ಶ್ರೀ ಚನ್ನಬಸವದೇವರು ಎಂದು ಸಂಭೋದಿಸೋಣ) ತಮ್ಮ ಮೂವತ್ತೂರನೆಯ

ವಯಸ್ಸಿನಲ್ಲಿ ಆತ್ಮತತ್ವದ ನಿಜ ಪ್ರಖರತೆಯನ್ನು ಪ್ರಕಟಿಸುತ್ತ, ದೇಹವನ್ನು ಎಸೆದರು. ಈ ಅತ್ಯಲ್ಪ ಕಾಲದಲ್ಲಿ ಪೂರ್ಣತ್ವದ ಅನುಭವ ಯೋಗಭ್ರಷ್ಟ ಮುಮುಕ್ಷುವಿಗೆ ಮಾತ್ರ ಆಗಲು ಸಾಧ್ಯ.

'ಮನುಷ್ಯಾನಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ.' ಸಹಸ್ರಾರು ಮನುಷ್ಯರಲ್ಲಿ ಯಾವನೋ ಒಬ್ಬ ಭಗವತ್‌ಪ್ರಾಪ್ತಿಯ ಉದ್ದೇಶದಿಂದ ಹೊರಡುತ್ತಾನೆ. 'ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಮ್ ವೇತ್ತಿ ತತ್ತ್ವತಃ.' ಭಗವತ್‌ಪ್ರಾಪ್ತಿಯ ಉದ್ದೇಶದಿಂದ ಹೊರಟ ಸಹಸ್ರಾರು ಪುರುಷರಲ್ಲಿ ಕ್ವಚಿತ್ತಾಗಿ ಯಾವನೋ ಒಬ್ಬನು ಭಗವತ್‌ಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾನೆ. ಇದು ಭಗವಂತನ ವಚನ. ಭಗವತ್‌ಪ್ರಾಪ್ತಿಗಾಗಿ ಪ್ರಯತ್ನಿಸುವವರಲ್ಲಿ ಯಾವನೋ ಒಬ್ಬನಿಗೆ ಮಾತ್ರ ಭಗವತ್‌ಪ್ರಾಪ್ತಿಯಾಗುತ್ತದೆಯೆಂದಾದರೆ, ಉಳಿದವರ ಗತಿ ಏನು? ಇನ್ನೇನು ಕೆಲವೇ ಹೆಜ್ಜೆ ಹಾಕಿದ್ದರೆ ಗಮ್ಯ ಸ್ಥಾನವನ್ನು ಆತ ತಲುಪುತ್ತಿದ್ದ. ಆದರೆ ಪ್ರಾರಬ್ಧ ಕರ್ಮವೆಂಬ ಎಣ್ಣೆ ತೀರಿದ್ದರಿಂದ, ಆಯುಷ್ಯವೆಂಬ ದೀಪ ಆರಿತ್ತು. ಆದ್ದರಿಂದ ಆತ ಗಮ್ಯ ಸ್ಥಾನವನ್ನು ತಲುಪಲಿಲ್ಲ. ಇಂತಹ ಪುರುಷನಿಗೆ ಯೋಗಭ್ರಷ್ಟನೆನ್ನುತ್ತಾರೆ. ಇಂಥವನ ಗತಿ ಏನು? ಎಂದು ಪ್ರಶ್ನೆ ಮಾಡಿದಾಗ ಭಗವಂತನು ಹೇಳಿದ. 'ಪಾರ್ಥ ನೈವೇಹ ನಾಮುತ್ರ ವಿನಾಶಃ ತಸ್ಯ ವಿದ್ಯತೆ.' ಅರ್ಜುನಾ ಆವನಿಗೆ ಇಹಲೋಕದಲ್ಲಾಗಲೀ ಪರಲೋಕದಲ್ಲಾಗಲೀ ದುರ್ಗತಿ ಎಂಬುದು ಇಲ್ಲ. ಸತ್ಕರ್ಮದಲ್ಲಿ ತೊಡಗಿದ ಯಾವನೂ ಅಧೋಗತಿಗೆ ಹೋಗಲಾರ. ಯೋಗಭ್ರಷ್ಟ ಪುರುಷನಿಗೆ ಪುಣ್ಯವಂತರಾದ ಸಾಧು ಸತ್ಪುರುಷರ ಸಹವಾಸ ದೊರೆಯುವಂತೆ ಜನ್ಮಪ್ರಾಪ್ತವಾಗುತ್ತದೆ. ಮತ್ತು ಹಿಂದೆ ಆತನು ಮಾಡಿದ ಪಾರಮಾರ್ಥಿಕ ಸಾಧನೆಯ ಸಂಸ್ಕಾರ ಮರುಕಳಿಸಿ, ಹಿಂದೆ ಆತನು ಎಲ್ಲಿಯವರೆಗೆ ಪಾರಮಾರ್ಥಿಕ ಸಾಧನೆಯಲ್ಲಿ ಮುಂದುವರೆದಿದ್ದನೋ, ಅಲ್ಲಿಂದಲೇ ಈ ಜನ್ಮದಲ್ಲಿ ಪರಮಾರ್ಥಿಕ ಸಾಧನೆಯನ್ನು ಮುಂದುವರೆಸುತ್ತಾನೆ.

'ಆಣೀ ಮಾಗೀಲ ಜೇ ಸದ್ಬುದ್ಧಿ। ಜೇಥ ಜೀವಿತಾ ಜಾಹಾಲೀ ಹೋತೀ ಅವಧಿ। ಮಗ ತೇಚಿ ಪುಢತಿ ನಿರವಧಿ।ನವೀ ಲಾಹೇ'॥ ಜ್ಞಾನೇಶ್ವರೀ ೬-೪೫೭ ಎನ್ನುವಂತೆ, ಹಿಂದಿನ ಜನ್ಮದ ಪಾರಮಾರ್ಥಿಕ ಸಂಸ್ಕಾರವೆಲ್ಲಾ, ಬಾಲ್ಯದಲ್ಲೇ ಶ್ರೀ ಚನ್ನಬಸವದೇವರಲ್ಲಿ ಮೈದೋರಲಾರಂಭಿಸಿದ್ದವು. ಶ್ರೀ ಚನ್ನಬಸವದೇವರು ಹದಿನಾಲ್ಕನೆಯ ವಯಸ್ಸಿನಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗ ಸುಭಾಸ . ಸಾಣಿಕೊಪ್ಪ ಎಂಬ ಸಹಪಾಟಿಯೊಂದಿಗೆ ಅತೀ ಸ್ನೇಹ. ಆ ಸಮಯದಲ್ಲಿ ಈ ಸುಭಾಸ . ಸಾಣಿಕೊಪ್ಪ ಎನ್ನುವ ಸಹಪಾಟಿಗೆ ಹದಿನಾಲ್ಕು ವಯಸ್ಸಿನ ಶ್ರೀ ಚನ್ನಬಸವ ದೇವರು ದೇವತಾ ಮನುಷ್ಯನಂತೆ ಕಾಣುತ್ತಿದ್ದರು. ಉಳಿದ ಎಲ್ಲರಂತೆ ಅಲ್ಲದೆ ಏನೋ ಒಂದು ವಿಶೇಷ ದೈವೀ ಕಳೆ ಇವರಲ್ಲಿ ಹೊರಚೆಲ್ಲುತ್ತಿತ್ತು. ಮಾತಿನಲ್ಲಿ ನಯ, ವಿನಯ, ಸೊಗಸುತನ; ಕ್ರಿಯಾ ಕಲಾಪಗಳಲ್ಲಿ ಚತುರತನ; ಎದುರಾಗುವ ಎಂಥಹುದೇ ಪ್ರಸಂಗವನ್ನು ಸಹಜವಾಗಿ ಸ್ವೀಕರಿಸಿ, ಧೈರ್ಯದಿಂದ ಮುನ್ನಡೆಯುವಿಕೆ, ಇವೆಲ್ಲ ಗುಣಗಳ ಸಮ್ಮಿಲನವು ಇತರರನ್ನು ಮಂತ್ರ ಮುಗ್ಧರನ್ನಾಗಿಸುತ್ತಿತ್ತು. ಸ್ವತಃ ಆನಂದ ಮೂರ್ತಿಗಳಾದ ಶ್ರೀ ಚನ್ನಬಸವ ದೇವರು ಸುತ್ತಲಿನ ಜನರನ್ನು ತಮ್ಮ ಹಾಸ್ಯದ ನುಡಿಗಳಿಂದ, ಆನಂದ ಪುಳಕಿತರನ್ನಾಗಿ ಮಾಡುತ್ತಿದ್ದರು. ಹಾಸ್ಯ ಪ್ರವೃತ್ತಿ ಎದ್ದು ಕಾಣುತ್ತಿತ್ತು. ಕಾಣಲು ಸಾಮಾನ್ಯರಂತೆ ಕಂಡರೂ ಸಹವಾಸದಲ್ಲಿನ ಜನರಿಗೆ 'ಇವನೊಬ್ಬ ಅಸಾಮಾನ್ಯ ಪುರುಷ, ಇಂಥವನ ಸಹವಾಸ ದೊರೆತಿದ್ದು ನಮ್ಮ ಭಾಗ್ಯ' ಎಂದು ಅನಿಸುತ್ತಿತ್ತು.

ಸುಪ್ತವಾಗಿದ್ದ ಆಧ್ಯಾತ್ಮಿಕ ಹಸಿವು ಬಾಲ್ಯದಲ್ಲೇ ಪ್ರಕಟವಾಯಿತು. ಹತ್ತೊಂಬತ್ತನೆಯ ವಯಸ್ಸಿನಲ್ಲಿ ಅವರೇ ಬರೆದ ಕವನವೊಂದರಿಂದ ಇದು ತಿಳಿದುಬರುತ್ತದೆ.

ದಾರಿತಪ್ಪಿಹುದೆನಗೆ

ಅಳಲಳಲಿ ಬಳಬಳಲಿ ಬರುತಿಹೆನು ನಾನು।
ದಾರಿತಪ್ಪಿಹುದೆನಗೆ ತಂದೆ ಎಲ್ಲಿರುವೆ ನೀನು॥
ಅಜ್ಞಾನಂಧಃಕಾರ ಮುಸುಕಿಹುದು ಎನ್ನ।
ದೀನಬಂಧುವೆ ಪರಿಹರಿಸಿ ಕಾಯೋ ಎನ್ನ॥

ದುಃಖ ಚಿಂತೆಗಳಲ್ಲಿ ಕಣ್ಣೀರು ಹರಿದು।
ದಾರಿ ದೀಪವೋ ಆರಿ ಬಿರುಮಳೆಯು ಸುರಿದು॥
ಕರೆದು ಕೂಗಿದರೆಲ್ಲೊ ಓಗೊಡುವರಿಲ್ಲ।
ನನ್ನ ಗೋಳನೇ ನೋಡಿ ನಗುವವರೇ ಎಲ್ಲ॥

ನಿನ್ನ ಚರಣದೊಳಿದೆ ಸುಧೆ ಅಮರವಾಗಿ।
ಸವಿಯ ಬರುವೆನು ನಾನು ಭ್ರಮರವಾಗಿ॥
ಜೀವನದ ಕಾಳ್ಗಿಚ್ಚು ಸುಡುತಿಹುದು ಎನ್ನ।
ಜ್ಞಾನ ಭಿಕ್ಷೆಯ ನೀಡು ದೇಹವಳಿಯುವ ಮುನ್ನ॥

೦೨. ೦೩. ೧೯೫೮.

ಈ ಕವನವನ್ನು ಬರೆದಾಗ ಶ್ರೀ ಚನ್ನಬಸವದೇವರಿಗೆ ೧೯ ವರುಷ. ಮುಂದೆ ತಮ್ಮ ಇಪ್ಪತ್ತೊಮ್ಮರನೆಯ ವಯಸ್ಸಿನಲ್ಲಿ ಬರೆದ ಇನ್ನೊಂದು ಕವನ. ಈ ಸಮಯಕ್ಕೆ ಅವರು ರಾಜಕೋಟಿನಲ್ಲಿ ನೌಕರಿಗೆ ಸೇರಿದ್ದರು.

ಗುರಿ

ದಶಕೆರೆಡು ಮೇಲ್ಮೂರು
ವರ್ಷ ಸಂಧವೋ ಎಂತೋ!
ಗತದಿನಗಳುದ್ದಕ್ಕೂ
ಹೊರಳಿ ದೃಷ್ಟಿಯ ಚೆಲ್ಲಿ
ಇನಿತುದ್ದ ಜೀವನದಿ
ಏನು ಮಾಡಿದೆಯೆಂದು
ನನ್ನ ನಾಂ ಕೇಳ್ದಾಗ
ಬರಿಯ ಶೂನ್ಯಾಕಾರ
ಮುಂದೆ ನಿಲ್ಲುವುದು.

ಮುಂದೇನು ಗತಿಯೆಂದು
ಮನವ ನಾಂ ಕೇಳ್ದಾಗ
ಮನವೇ ಶೂನ್ಯತೆಯಲ್ಲಿ
ಮುಳುಗಿ ಹೋಗುವುದು.

ಒಮ್ಮೆ ಹೋದಾ ಹೊತ್ತು
ಮರಳಿ ಬಾರದು ಮತ್ತೆ
ಚಣಚಣಗಳೂ ಕೂಡ
ಅಮೂಲ್ಯ ಅರಿತವಗೆ.

ಹಿಂದೆ ಆದುದಕೆ
ಚಿಂತಿಸಿದರೇನರ್ಥ

ಪಡೆದ ಭಾಗ್ಯವದೇನು
ಸಮಯ ವ್ಯರ್ಥ.

ಎಲೆ ಮನವೇ ನೀನಿಂದು
ಬೆದರದಿರು ನಡೆ ಮುಂದು
ದೇವನನು ನಂಬಿ ನಡೆ
ಸಾಗು ಆ ಬೆಳಕಿನೆಡೆ.

ನೋಡು ಒಡೆದಿವೆ ಅಲ್ಲಿ
ಟಿಸಿಲು ದಾರಿಗಳೆಷ್ಟೋ
ಪುಣ್ಯಾತ್ಮರಾ ಪಾದ
ಪದ್ಮಗಳ ಗುರುತಲ್ಲಿ
ಎಷ್ಟು ನಿಚ್ಚಳವಾಗಿ
ಹೊಳೆಯುತಿಹವು.

ಅವರೆಷ್ಟೋ ಹಿತವಚನ
ದಾರಿ ಎಡಬಲದಿ
ದಾರಿ ದೀಪದ ತೆರದಿ
ಹೊಳೆಯುತಿವೆ ನೋಡು.
ನೋಡು ದೂರದಲಲ್ಲಿ
ಪೂರ್ವದಾ ತುದಿಯಲ್ಲಿ
ನಿನ್ನ ಗುರಿಯಾ ದೀಪ
ಹಣತೆ ಮಿಣುಕುತಿಹುದು.

ನಡೆ ಮುಂದೆ ಹೆಜ್ಜೆ ಇಡು

ಚಿಂತೆಗಳ ನೀ ಬಿಸುಡು

ಹೆಜ್ಜೆ ಹೆಜ್ಜೆಗೆ ಕಲ್ಲು

ಮುಳ್ಳುಗಳು ಹರಡಿಹವು

ಕಾಲು ಕುಂಟಾದರೂ

ಸರಿಯೇ; ಮುಂದಕೆ ಸಾಗು

ಹಣವ ತೊಡು ನೀನಿಂದು

ಉಸಿರು ತೀರುವ ಮುನ್ನ

ಗುರಿಯ ತಲುಪಿದರೇನೇ

ಬಾಳು ಸಾರ್ಥಕವೆನ್ನು.

ಕೇಳಿಲ್ಲವೇ? ಶರಣರ ನುಡಿಯ

ನಂಬಿ ಕರೆದಡೆ ಓ! ಎನ್ನನೇ ಶಿವನು ,

ಬೆಳಕು ಕತ್ತಲೆಯಾಟ

ಅಳುಕುತಿಹೆ ನೀನೇಕೆ

ಧೈರ್ಯದಾ ಊರುಗೋಲಿರಲಿ

ಕೈಯೊಳು ನಿನಗೆ.

ಏಳು ನಡೆ

ನಡೆ ಮುಂದು

ಸಾಗು ಆ ಬೆಳಕಿನೆಡೆ.

೧೭.೧೨.೧೯೬೧.

ಶ್ರೀ ಚನ್ನಬಸವ ದೇವರು ಮುಂದೆ ೨೫ ನೇ ವಯಸ್ಸಿನಲ್ಲಿ ಬರೆದ ಕವನ ಈ ರೀತಿ ಇದೆ.

ದಾರಿ ತೋರಿಸು ಗುರುವೆ

ದಾರಿಯರಿಯದೆ ನಾನು
ತಿರುತಿರುಗಿ ಬೇಸತ್ತೆ
ತಿರುಗಿದೆನು ಗಾಣಿಗರ ಎತ್ತಿನಂತೆ।
ನೀರಡಿಸಿ ಬಂದಿಹೆನು
ನೂರಾರು ಜಗ ಸುತ್ತಿ
ಹಿರಿಯಾಸೆ ಹೊತ್ತು ನಾ ನಿನ್ನ ಬಳಿಗೆ॥

ಪರಮ ಗುರುವೆ ನಿನ್ನ
ಚರಣಾರವಿಂದದಲಿ
ಶಿರಬಾಗಿ ಬೇಡುವೆನು ಭಕ್ತಿಯಿಂದ।
ಅರಿಯದಲೆ ನಾನೆಷ್ಟೊ
ಅರಿತು ಮಾಡಿದೆನೆಷ್ಟೊ
ಗುರುವೆ ನನ್ನೆಲ್ಲ ತಪ್ಪುಗಳ ಕ್ಷಮಿಸು॥

ಮರೆತು ನಿನ್ನಯ ನಾಮ
ಸ್ಮರಣೆಯ ಮಾಡದಲೆ
ಸರಿದು ಹೋದವು ದೇವ ದಿನಗಳೆಷ್ಟೊ।
ದುರಿತ ಕರ್ಮಗಳೆನ್ನ
ಇರಿದು ಕೊಲ್ಲುತಲಿಹವು
ಪೊರೆಯಿದಿರೆ ಬೇರೆನ್ನ ಕಾಯ್ವರಾರು॥

ತೊರೆದು ಮನೆಮಾರು ಮಠ
ಗಿರಿಬಯಲು ತಿರುಗಿದೊಡೆ

ದೊರೆಯದೆಂದಿಗು ಮುಕ್ತಿ ಗುರುವಿಲ್ಲದೆ।

ದಾರಿ ತೋರಿಸು ಗುರುವೇ

ಹರಣ ಹಾರುವ ಮುನ್ನ

ಕರುಣಿಸೈ ಕಾಪಾಡು ಎನ್ನ ತಂದೆ॥

೩೧.೦೩.೧೯೬೪

ಈ ಎಲ್ಲಾ ಕವನಗಳಿಂದ ೧೮-೧೯ ನೇ ವಯಸ್ಸಿನ ಬಾಲಕನಾಗಿರುವಾಗಲೇ ಶ್ರೀ ಚನ್ನಬಸವ ದೇವರಲ್ಲಿ ಎಂತಹ ಪ್ರಚಂಡವಾದ ಆಧ್ಯಾತ್ಮಿಕ ಹಸಿವು ಉಂಟಾಗಿತ್ತು ಎಂಬುದು ತಿಳಿದುಬರುತ್ತದೆ.

ಶ್ರೀ ಚನ್ನಬಸವದೇವರು ೧೯೬೦ ನೇ ಇಸ್ವಿಯಲ್ಲಿ ಟೆಲಿಫೋನ್ ಇಲಾಖೆಯಲ್ಲಿ ನೌಕರಿಗೆ ಸೇರಿ ರಾಜಕೋಟಕ್ಕೆ ಹೋದರು. ೧೯೬೩ ನೇ ಇಸ್ವಿಯಲ್ಲಿ ವಿವಾಹವಾದರು. ಸರಕಾರಿ ನೌಕರಿ ಮಾಡುತ್ತಲಿರುವಾಗಲೂ ಬದುಕಿನ ನಶ್ವರತೆಯ ಅರಿವಾಗಿ, ಭಯಾನಕ ಭವಸಾಗರದಿಂದ ಪಾರಾಗುವ ಅದಮ್ಯ ಹಂಬಲದಿಂದ, ಗುರುವಿನ ಮಾರ್ಗದರ್ಶನಕ್ಕಾಗಿ ಚಡಪಡಿಸ ಲಾರಂಭಿಸಿದರು. ಇವು ಯಾವವೂ ಯಾರ ಕಣ್ಣಿಗೂ ಬೀಳಲಿಲ್ಲ. ಜನ ಕಂಡಿದ್ದು ಹಾಸ್ಯ ಪ್ರವೃತ್ತಿಯನ್ನು ಮಾತ್ರ. ೧೯೬೭ ನೇ ಇಸ್ವಿಯಲ್ಲಿ ನೌಕರಿಗೆ ರಾಜೀನಾಮೆ ಕೊಟ್ಟು ಬೆಳಗಾಂವಿಗೆ ಬಂದು ದಲಾಲಿ ಅಂಗಡಿ ತೆರೆದರು.

ಅದು ಹೇಗೋ ಏನೋ ಮುರುಗೋಡಿನ ಶ್ರೀ ಮಹಾಂತೇಶ ಸ್ವಾಮಿಗಳವರ ಸಂಪರ್ಕಕ್ಕೆ ಬಂದರು. ಮುರುಗೋಡಿನ ಶ್ರೀಗಳು ಪವಾಡ ಪುರುಷರು, ಹಲವಾರು ಸಿದ್ಧಿಗಳನ್ನು ಸಾಧಿಸಿದವರು. ಜನ ತಮ್ಮ ತಮ್ಮ ಕಷ್ಟ-ನಷ್ಟಗಳಿಂದ ಪಾರಾಗಲು ಆರ್ತರಾಗಿ ಮುರುಗೋಡಿನ ಶ್ರೀಗಳವರನ್ನು ಆಶ್ರಯಿಸುತ್ತಿದ್ದರು. ಆದರೆ ಶ್ರೀ ಚನ್ನಬಸವದೇವರು ಶ್ರೀಗಳವರಲ್ಲಿ ಯಾವುದೇ ಲೌಕಿಕ ಸಮಸ್ಯೆಗಳಿಗೆ ಪರಿಹಾರವನ್ನು ಕೇಳದೆ ಆತ್ಮಕಲ್ಯಾಣದ ಮಾರ್ಗವನ್ನು ಕೇಳಿದರು.

ಮುರುಗೋಡಿನ ಶ್ರೀಗಳವರಾದರೋ ನಿಷ್ಠಾವಂತ ಸಾಧಕರು; ದಿನಕ್ಕೆ ಮೂರು ಸಾರಿ ಲಿಂಗಪೂಜೆಯಲ್ಲಿ ಮೈಮರೆಯುವವರು. ಇಷ್ಟಲಿಂಗದ ಆರಾಧನೆಯೇ ಜೀವಿತದ ಮುಖ್ಯ ಉದ್ದೇಶವೆಂದು ಬಗೆದು, ಅದರಲ್ಲಿಯೇ ಮುಳುಗಿದವರು. ತಾವು ಕಂಡು ಉಂಡು ಸಾಗಿದ ಮಾರ್ಗವನ್ನೇ ಶ್ರೀ ಚನ್ನಬಸವದೇವರರಿಗೂ ತೋರಿಸಿದರು. ವೀರಶೈವ ಧರ್ಮದವರೇ ಆದ ಶ್ರೀ ಚನ್ನಬಸವದೇವರು ಶ್ರೀಗಳವರಿಂದಲೇ ಲಿಂಗದೀಕ್ಷಿತರಾಗಿ ಲಿಂಗಪೂಜೆಯನ್ನು ವಿಧಿಯುಕ್ತವಾಗಿ ಮಾಡಲು ಪ್ರಾರಂಭಿಸಿದರು. ಭವಸಾಗರದಿಂದ ಪಾರಾಗಲು ದೊರಕಿದ

ಮೊದಲ ಆಶ್ರಯವಿದು. ಸಿಕ್ಕ ಆಶ್ರಯವನ್ನು ಬಲವಾಗಿ ಹಿಡಿದರು. ದೃಢಭಕ್ತಿ–ಅಚಲ ವಿಶ್ವಾಸದಿಂದ, ತನ್ಮಯತೆಯಿಂದ ಕರತಲದಲ್ಲಿ ಲಿಂಗವನಿಟ್ಟು ಪೂಜಿಸಲಾರಂಭಿಸಿದರು. ಕರತಲದಲ್ಲಿನ ಲಿಂಗ ಚೈತನ್ಯವನ್ನು ಹೊರಹಾಕ ಲಾರಂಭಿಸಿತು. ದಿವ್ಯಜ್ಯೋತಿಯೊಂದು ಲಿಂಗದಿಂದ ಕಾಣಲಾರಂಭಿಸಿತು. ಪ್ರತಿನಿತ್ಯ ದಿವ್ಯ ಅನುಭವಗಳಾಗ ತೊಡಗಿದವು. ಮುರುಗೋಡಿಗೆ ಶ್ರೀಗಳವರನ್ನು ಕಾಣಲು ಮೇಲಿಂದಮೇಲೆ ಹೋಗಲಾರಂಭಿಸಿದರು.

ಆಗ ನಡೆದ ಒಂದು ಘಟನೆ. ಒಮ್ಮೆ ರಾತ್ರಿ ಸ್ಕೂಟರ್ ಮೇಲೆ ಒಬ್ಬರೇ ಮುರುಗೋಡಿಗೆ ಹೊರಟಿದ್ದಾರೆ. ಮಳೆ ಪ್ರಾರಂಭವಾಗಿದೆ. ಸಂಪಗಾಂವ ಹತ್ತಿರ ರಸ್ತೆಗೆ ಅಡ್ಡವಾಗಿ ಲೈಟ್ ಕಂಬವೊಂದು ಬಿದ್ದಿದೆ.ಮಳೆ ಗುಡುಗು ಮಿಂಚುಗಳ ಆರ್ಭಟದಲ್ಲಿ, ಕತ್ತಲೆಯಲ್ಲಿ ರಸ್ತೆಗೆ ಅಡ್ಡವಾಗಿ ಬಿದ್ದಿರುವ ಆ ಲೈಟ್ ಕಂಬವು ಕಾಣಲೇ ಇಲ್ಲ. ಆಗಬೇಕಾದ ಅಪಘಾತ ಆಗಿಯೇ ಬಿಟ್ಟಿತು. ಇವರು ಸ್ಕೂಟರ್‌ನಿಂದ ಕೆಳಗೆ ಬಿದ್ದರು. ಗಾಯವೇನೂ ಆಗಲಿಲ್ಲ. ಎದ್ದು ನೋಡುತ್ತಾರೆ ಸ್ಕೂಟರ್ ಕೀ ಎಲ್ಲೋ ಬಿದ್ದಿದೆ. ಕತ್ತಲಲ್ಲಿ, ಸುರಿಯುವಾ ಮಳೆಯಲ್ಲಿ, ಮಳೆಯ ನೀರಿನಲ್ಲಿ ಎಲ್ಲೋ ಬಿದ್ದಿರುವ ಆ ಚಿಕ್ಕದಾದ ಕೀಯನ್ನು ಹೇಗೆ ಹುಡುಕುವುದು? ಏನು ಮಾಡಬೇಕೆಂದು ತೋಚದೇ ಕತ್ತಲಲ್ಲೇ ನಿಂತಿದ್ದಾರೆ ಮಳೆಯಲ್ಲಿ ನೆನೆಯುತ್ತ; ಮನದಲ್ಲಿ ಶ್ರೀಗಳವರನ್ನು ನೆನೆಯುತ್ತಿದ್ದಾರೆ 'ನಿನ್ನ ಇಚ್ಛೆಯಿದ್ದಂತಾಗಲಿ' ಎಂದು.

ಕತ್ತಲಲ್ಲಿ ಏನೋ ಸದ್ದಾಯಿತು. ಹಿಂತಿರುಗಿ ನೋಡಿದರೆ ಮುರುಗೋಡಿನ ಶ್ರೀಗಳವರು ನಿಂತಿದ್ದಾರೆ. ಶ್ರೀ ಚನ್ನಬಸವದೇವರು ಆಶ್ಚರ್ಯ–ಭಕ್ತಿಯಿಂದೊಡಗೂಡಿ ಬಾಗಿ ಕಾಲಿಗೆ ನಮಸ್ಕರಿಸಿದರು. 'ತೆಗೆದುಕೋ' ಎಂಬಂತೆ ಕೈ ಮುಂದೆ ಮಾಡಿದರು ಮುರುಗೋಡಿನ ಶ್ರೀಗಳವರು. ಇವರು ಕೈಯೊಡ್ಡಿದರು. ಇವರ ಕೈಗೆ ಸ್ಕೂಟರ್ ಕೀ ಕೊಟ್ಟು ಮುರುಗೋಡಿನ ಶ್ರೀಗಳು ಮರುಕ್ಷಣದಲ್ಲಿ ಕತ್ತಲ್ಲಲ್ಲಿ ಅದೃಶ್ಯರಾದರು. ಶ್ರೀ ಚನ್ನಬಸವದೇವರು ಶ್ರೀಗಳವರ ಮಹಿಮೆಯನ್ನು ಮನದಲ್ಲೇ ಮೆಲುಕು ಹಾಕುತ್ತಾ ಮುರುಗ್ಗೋಡಿಗೆ ಹೋದರು.

ಶ್ರೀ ಚನ್ನಬಸವದೇವರು ೧೯೭೦ ನೇ ಇಸ್ವಿಯಲ್ಲಿ ಹುಣಶೀಕಟ್ಟಿ ಗ್ರಾಮದ ತಮ್ಮ ಹೊಲದಲ್ಲಿ ಭಾವಿಯೊಂದನ್ನು ತೆಗೆಸಿದರು. ನೀರು ಸಾಕಷ್ಟು ದೊರಕಿತು. ಭಾವಿಯ ಸುತ್ತ ಕಲ್ಲಿನ ಗೋಡೆ ಕಟ್ಟಿಸುತ್ತಿದ್ದಾರೆ. ಭಾವಿಯಲ್ಲಿನ ನೀರನ್ನು ಮೋಟರ್ ಸಹಾಯದಿಂದ ಮೇಲಕ್ಕೆ ಎತ್ತುತ್ತಲೇ ಇದ್ದಾರೆ. ಅದು ಮಳೆಗಾಲದ ಸಮಯ. ಕಟ್ಟಡದ ಕೆಲಸ ನಡೆದಿದೆ. ಮೇಲೆ ಆಗಸದಲ್ಲಿ ಕಪ್ಪು ಮೋಡಗಳು ಕವಿದವು. ಗುಡುಗು ಮಿಂಚು ಪ್ರಾರಂಭವಾಯಿತು. ಇನ್ನೇನು ಮಳೆ ಬಂದೇ ಬಿಟ್ಟಿತು, ಎನ್ನುವ ವಾತಾವರಣ. ಮಳೆ ಬಂದರೆ ಇಲ್ಲಿಯವರೆಗೆ ಮಾಡಿದ ಕೆಲಸವೆಲ್ಲ ನೀರಿನಲ್ಲಿ ಹೋಮ ಮಾಡಿದಂತಾಗುವದು. ಕೆಲಸವನ್ನು ನಿಲ್ಲಿಸಬೇಕೋ; ಮುಂದುವರೆಸಬೇಕೋ, ಎಂಬ

'ಅನಿರ್ಧಾರತೆ' ತೂಗುಯ್ಯಾಲೆಯಾಡುತ್ತಲಿದೆ ಶ್ರೀ ಚನ್ನಬಸವದೇವರ ಮನದಲ್ಲಿ.

ಸಹಜವಾಗಿ ಕಣ್ಣುಮುಚ್ಚಿ ಮುರುಗೋಡಿನ ಶ್ರೀಗಳವರನ್ನು ಧ್ಯಾನಿಸಿದರು. ಎದುರಿಗೆ ಬಂದ ಕಷ್ಟವನ್ನು ನಿವಾರಿಸಲು ಆರ್ತನಾಗಿ ಶ್ರೀಗಳವರನ್ನು ನೆನೆಯುತ್ತಿಲ್ಲ. ಲಿಂಗಾಂಗ ಸಾಮರಸ್ಯದ ಮಾರ್ಗವನ್ನರುಹಿದ ಮುರುಗೋಡಿನ ಶ್ರೀಗಳವರನ್ನು ಶ್ರೀ ಚನ್ನಬಸವದೇವರ ಮನ ನೆನೆಯುತ್ತಲೇ ಇತ್ತು. ಸಹಜವಾಗಿ ಶ್ರೀಗಳವರನ್ನು ನೆನೆದಾಗ, ಮನದ ಆ ನೆನಹು ಶ್ರೀಗಳವರ ಮೂರ್ತರೂಪ ತಾಳಿ ಮನದಲ್ಲೇ ಪ್ರಕಟವಾಯಿತು. 'ಯೋಚನೆ ಬೇಡ, ಕೆಲಸ ಮುಂದುವರೆಸು, ನಾನಿರುವೆ. ಯಾವ ತೊಂದರೆಯೂ ಬರುವುದಿಲ್ಲ.' ಎಂದು ನುಡಿಯಿತು ಆ ಶ್ರೀಗಳವರ ಮೂರ್ತರೂಪ.

ಶ್ರೀ ಚನ್ನಬಸವದೇವರು ಕೆಲಸ ಮುಂದುವರೆಸಿದರು. ಕೆಲಸಗಾರರಿಗೆ ಇದು ಮೂರ್ಖತನದಂತೆ ಕಾಣತೊಡಗಿತು. ಕಾರ್ಮುಗಿಲುಗಳು ಒಂದಕ್ಕೊಂದು ಹಾದಾಡಿ ಘನಘೋರವಾಗಿ ಘರ್ಜಿಸುತ್ತ, ಮಿಂಚಿನಸ್ತ್ರ ಝಳಪಿಸುತ್ತ; ಎಣೆಯಿಲ್ಲದ ಉತ್ಸಾಹದಿಂದ ಪ್ರಚಂಡ ಮಳೆಯನ್ನು ಸುರಿಸಲು ಸಿದ್ಧವಾಗುತ್ತಲಿವೆ. ಆದರೆ ಮಳೆಯನ್ನು, ಮಳೆಯಿಂದಾಗಬಹುದಾದ ಹಾನಿಯನ್ನು ಗಮನಕ್ಕೆ ತಂದುಕೊಳ್ಳದೇ 'ಕೆಲಸವನ್ನು ಮುಂದುವರೆಸಿ' ಎಂದು ಹೇಳುವ ಶ್ರೀ ಚನ್ನಬಸವದೇವರು ಕೆಲಸಗಾರರಿಗೆ ಮೂರ್ಖರಂತೆ ಕಂಡದ್ದು ಅಚ್ಚರಿಯೇನಲ್ಲ.

ನೆತ್ತಿಯ ಮೇಲೆ ಕಾರ್ಮುಗಿಲುಗಳು ಸಮರ ಸಾರಿ ನಿಂತಿದ್ದರೂ, ಶ್ರೀ ಚನ್ನಬಸವದೇವರು ಚಿತ್ತವಿಚಲಿತಗೊಳ್ಳದೇ ಭಾವಿಯ ಕೆಲಸ ಮಾಡಿಸುತ್ತಿದ್ದಾರೆ. ಭಾವಿಯ ಕೆಲಸ ಮುಗಿದು ಏಳೆಂಟು ತಾಸು ಕಳೆದರೂ ಒಂದು ಹನಿ ಮಳೆಯ ನೀರು ಕೆಳಗಿಳಿಯಲಿಲ್ಲ. ಕೆಲಸಕ್ಕೆ ಯಾವ ತೊಂದರೆಯೂ ಆಗಲಿಲ್ಲ.

ಈ ರೀತಿ ಪವಾಡ ಸದೃಶ ಘಟನೆಗಳು ದಿನನಿತ್ಯ ನಡೆಯುತ್ತಲೇ ಇದ್ದವು. ಪವಾಡಗಳನ್ನು ಕಂಡು ಶ್ರೀ ಚನ್ನಬಸವದೇವರು ಆಶ್ಚರ್ಯಕ್ಕೆ ಒಳಗಾಗುತ್ತಿರಲಿಲ್ಲ. ಪರಮಾರ್ಥ ತತ್ತ್ವದ ನಿಜನಿಲುವಿನಲ್ಲಿ ಎಂದು ನಿಂತೇನು? ಹೇಗೆ ನಿಲ್ಲುವುದು? ಎಂದು ಚಡಪಡಿಸುತ್ತಿದ್ದಾರೆ. ಲಿಂಗದಿಂದ ಕಾಣುವ ಜ್ಯೋತಿ, ದಿನನಿತ್ಯ ನಡೆಯುವ ಪವಾಡಗಳು ಶ್ರೀ ಚನ್ನಬಸವದೇವರನ್ನು ತೃಪ್ತರನ್ನಾಗಿಸುತ್ತಿಲಿಲ್ಲ. ಧನ್ಯತೆಯ ಭಾವ ಹೊರಸೂಸುತ್ತಲಿಲ್ಲ. ನಿಜ ತತ್ತ್ವಕ್ಕಾಗಿ, ನಿಜ ಸಮಾಧಾನಕ್ಕಾಗಿ, ನಿಜ ಸದ್ಗುರುವಿಗಾಗಿ ತಳಮಳಿಸುತ್ತಿದ್ದಾರೆ.

***

ತದ್ವಿದ್ಧಿ ಪ್ರಣಿಪಾತೇನ
ಪರಿಪ್ರಶ್ನೇನ ಸೇವಯಾ
ಉಪದೇಕ್ಷ್ಯಂತಿ ತೇ ಜ್ಞಾನಮ್
ಜ್ಞಾನಿನಸ್ತತ್ತ್ವದರ್ಶಿನಃ

ಗೀತಾ ೪-೩೪.

ತತ್ತ್ವವೇತ್ತರಾದ ಮಹಾತ್ಮರಿಗೆ
ನಿನ್ನನ್ನು ನೀನು ಸಮರ್ಪಿಸಿಕೊಂಡು,
ಅವರನ್ನೇ ಆಶ್ರಯಿಸಿ
ಸೇವೆ ಸಲ್ಲಿಸಿ
ವಿನಯದಿಂದ ಪ್ರಶ್ನೆಮಾಡಿದಾಗ,
ಆ ಮಹಾತ್ಮರು ನಿನಗೆ
ತತ್ತ್ವಜ್ಞಾನವನ್ನು
ಉಪದೇಶ ಮಾಡಬಲ್ಲರು

ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್

ಅನಂತ ಜನ್ಮದ ಸುಕೃತದ ಫಲ. ಅಂದೊಮ್ಮೆ ಕಾದ್ರೊಳ್ಳಿಯ ಶ್ರೀಗಳಲ್ಲಿರುವ ಶ್ರೋತ್ರಿಯತ್ವ–ಬ್ರಹ್ಮನಿಷ್ಠತ್ವವು ಶ್ರೀ ಚನ್ನಬಸವದೇವರಿಗೆ ಪ್ರಕಟವಾಯಿತು. ಅಂದು ಕಾಣಬಾರದ ಸದ್ಗುರು ಕಣ್ಣಿಗೆ ಗೋಚರವಾಗಿದ್ದಾನೆ. ಅನಂತ ಪುಣ್ಯದ ಬಲದಿಂದ ಶಿಷ್ಯನ ಹೃದಯದಲ್ಲಿ ಮೊದಲೇ ಅಚ್ಚೊತ್ತಿದ್ದ ಸದ್ಗುರುವಿನ ರೂಪ ಎದುರಿಗೆ ಮೈವಡೆದು ನಿಂತಿದೆ. ಮನದ ನಿರ್ಣಯ ಮಿಡಿಯುತ್ತಲಿದೆ 'ಈತನೇ ನಿನ್ನ ಗುರು' ಎಂದು. ಅಂದು ಕಂಡವರನ್ನು ಇಂದು ಕಂಡೆ ಎಂದು, ಅಂದೇ ಎರಗಿದರು ಗುರುಪಾದಕ್ಕೆ ನಿಜಭಕ್ತಿಯಿಂದ. ಶ್ರೀಗಳವರಲ್ಲಿ ಶರಣಾಗತರಾಗಿ ಈ ರೀತಿ ತಮ್ಮ ಧನ್ಯತೆಯನ್ನು ಹೊರ ಹಾಕಿದರು.

ಎಲ್ಲ ನಿನ್ನೊಳಗುಂಟು

ಯಾವ ಜನ್ಮದ ಪುಣ್ಯ ಕರೆದು ತಂದಿಹುದಿಲ್ಲಿ।
ಮುಳುಗಿ ಮೈಮರೆತೆ ಪರಮಾನಂದದಲ್ಲಿ॥

ಏಳು ಜನುಮಗಳಿಂದ ನಾ ಬಯಸಿ ಬಂದಿದ್ದೆ।
ಗುರುವೆ ದರ್ಶನವಿತ್ತೆ, ಬದುಕಿದೆನು ತಂದೆ॥

ಭವದುಃಖದಲಿ ಬೆಂದು ಬಹು ಜನುಮಗಳ ತಿರುಗಿ।
ತಾಳಲಾರದೆ ನಾನು ಮನದೊಳಗೆ ಬಹುಕೊರಗಿ॥

ಹಗಲಿರುಳು ನೆನೆಯುತ್ತ ನಾ ಹುಡುಕುತಿದ್ದೆ।
ಎಂದು ಸಿಕ್ಕಾನೆಂದು ದಿನ ನೂಕುತಿದ್ದೆ॥

ಕತ್ತಲೆಯ ಗರ್ಭದಲಿ ನಾ ಹುದುಗಿ ಮಲಗಿದ್ದೆ।
ಧನ್ಯ ನಾದೆನು ತಂದೆ ತವಪಾದದಲಿ ಬಿದ್ದೆ॥

ಕಾಮಕ್ರೋಧಾದಿಗಳು ಮತ್ತೆ ಮಮಕಾರಗಳು।
ಮರಳಿಮರಳೀ ಜನ್ಮಕೆಳಿಸಿ ತಂದಿಹವು।

ಒಲ್ಲೆನಯ್ಯೋ ಗುರುವೇ ಕೈಹಿಡಿದು ಕಾಪಾಡು।
ಸಾಕು ಸಾಕೀ ಜನುಮ ಕರುಣೆಸೆನ್ನನು ನೋಡು॥

ಬಂಧು ಬಳಗಗಳುಂಟು ಧನಕನಕಗಳು ಉಂಟು।
ಏನಿದ್ದರೇನುಂಟು ಇಲ್ಲದಿರೆ ಏನುಂಟು॥

ಅಪ್ಪ ಸದ್ಗುರುನಾಥ ನಿನ್ನ ಬಿಟ್ಟೇನುಂಟು।
ಕರುಣಾಳು ಓ ತಂದೆ ಎಲ್ಲ ನಿನ್ನೊಳಗುಂಟು॥

೩೦.೦೯.೧೯೭೦

ಹೀಗೆ ಸದ್ಗುರುನಾಥನ ಪಾದಕಮಲಗಳಲ್ಲಿ ಅನನ್ಯವಾಗಿ ಶರಣಾದರು.

ಕಾಣ್ಬುದೆಲ್ಲವೂ ಬರಿಯ ಭ್ರಮೆ

ನಾನು ನನ್ನವರೆಂಬ ಅಹಮಿಕೆ-
ಹೆಣೆದು ನಿನ್ನನು ಸುತ್ತಿಹಾಕಿದೆ
ಕಾಣುತೀ ಜಗದಾಸೆ ವೈಭವ ಮೋಹಭ್ರಾಂತಿಯಲಿ ।
ಮನಸಿನೀ ಕುಡಿಗೆಂದು ಕೊನೆಯಿದೆ
ಎಣಿಸುಬೇಡಿೀ ವ್ಯರ್ಥ ದಿನಗಳ
ಕಾಣು, ಕಾಣದ ನಿತ್ಯಸುಖದಾನಂದವನು ಮನುಜ॥

ನನ್ನ ಹೆಂಡತಿ ನನ್ನ ಮಕ್ಕಳು
ನನ್ನ ಬಳಗವು ನನ್ನ ಹೊಲಮನೆ
ಎನ್ನುತೀ ಜಗದಾಶೆಯಲ್ಲವ ಮನಸಿನಲಿ ತೊಟ್ಟು।

ನನ್ನ ಹರಿಹಮನಾರು ಎನ್ನುತ
ಹೆಣ್ಣು ಹೊನ್ನಿನ ಮೋಹಮದದಲಿ
ನಿನ್ನ ನೀ ಮರೆತಿಂತು ನಡೆದರೆ ಎಂತು ಸುಖವಹುದು||

ಯಾರು ಬರುವರೊ ಮರುಳು ಮನುಜಾ
ಹೊರಟು ಹೋಗುವ ಕಾಲದಲ್ಲಲೆ
ತೊರೆದು ಹೋಗುವೆ ಧನಕನಕಸತಿಪುತ್ರರೆಲ್ಲರನು|
ಬರಿಯ ಭ್ರಮೆಯಿದು ಕಾಣ್ವುದೆಲ್ಲವು
ತೋರಿ ಸುಖ ಕಡೆಯಲ್ಲಿ ದುಃಖವು
ನರನೆ ನಿತ್ಯಾನಿತ್ಯಗಳ ನೀನರಿತು ಸುಖಿಯಾಗು||

ಧನದ ಮದದಲಿ ಮರೆಯ ಬೇಡಲೇ
ಕ್ಷಣಿಕ ಸುಖದಲಿ ಮುಳುಗಬೇಡಲೇ
ನಿನಗೆ ಮತ್ತಾರಿಲ್ಲ ಈ ಜಗದಲ್ಲಿ ಕಾಯ್ವವರು|
ಕೊನೆಗೆ ತಿರುತಿರುಗೆಲ್ಲಿ ಹೋದರು
ಕಾಣದೆ ನಿಜ ಬಟ್ಟೆಯನು ನೀ
ಮಣಿದು ಗುರುವಿಗೆ ಶರಣುಪೋಗಲು ಗುರುವೆ ಗತಿ ನಿನಗೆ||

ತೊಡಕಿನೀ ಸಂಸಾರದಿಂ ನೀ
ಬಿಡುಗಡೆಯ ಬಯಸಿದರೆ ಬಿಡದಲೆ
ಹಿಡಿಯೋ ಸದ್ಗುರು ಅಪ್ಪದೇವನ ಪಾದಪಂಕಜವ|
ಬಿಡದೆ ಕರುಣಿಸಿ ಹರಿಸಿ ಪೊರೆವನು
ನೀಡಿ ಜ್ಞಾನಾಮೃತವನೆರೆವನು
ಪಡೆಯೋ ನಿಜಸುಖ ಅಡಿಯಲರ್ಪಿಸಿ ನಿನ್ನ ಜೀವನವ||

ಹಿಡಿಯೋ ಸದ್ಗುರು ಅಪ್ಪದೇವನ
ಪಾದಪಂಕಜ ಭಕ್ತಿಯಿಂದಲಿ
ಪಡೆಯೋ ಜ್ಞಾನಾಮೃತವ ಅನುಭವಸಾರ ಭಕ್ತಿಯೊಳು।
ಬಿಡದೆ ಉಪದೇಶಗಳ ಸೇವಿಸಿ
ನಡೆದುದಾದರೆ ನಿತ್ಯದಲಿ ನೀ
ತೊಡೆದು ಮೂದೋಷಗಳ ಮುಳುಗುವೆ ಶೂನ್ಯದಲಿ ಮನುಜ

೦೪.೧೧.೧೯೭೦.

ನಿತ್ಯ ಸುಖಿಯಾಗು

ಯಾಕೆ ಚಿಂತಿಸುತಿಂತು ಕುಳಿತಿಹೆ
ಸಾಕು ಆಗದು ಲೋಕದಾಸೆಯು
ಲೋಕದೊಡೆತನ ಸಿಕ್ಕರೂ ನಿನಗೆಲ್ಲಿ ಸುಖವುಂಟು।
ಬೇಕು ಬೇಕೆಂದೆನಿಸಿ ಮನವದು
ಸಾಕು ಎನ್ನದೆ ಓಡುತಿರುವುದು
ಜೋಕೆ ನೀ ಬೆಂಬತ್ತಿದರೆ ಭವದುಃಖವೇ ನಿನಗೆ॥

ಏನು ಗಳಿಸಿದರೇನು ಮಾಡಿದ-
ರೇನು ಎಲ್ಲವ ಬಿಟ್ಟು ಪೋಗುವೆ
ಕ್ಷಣದ ಮಾಯೆಯು ಮರುಳಗೊಳಿಸುಪಹಾಸಗೊಳಿಸುವದು।
ಮನದ ಬೆಂಬತ್ತಿದರೆ ನಿನ್ನದು
ಕ್ಷಣದ ಸುಖಭ್ರಾಂತಿಯಲಿ ಮುಳುಗಿಸಿ
ಎಣಿಕೆಯಿಲ್ಲದ ಭವಭವಾಂತದಿ ಎಳೆದು ಒಯ್ಯುವುದು॥

ಹಿಂದೆ ಮಾಡಿದ ಕರ್ಮಗಳ ನೀ
ನಿಂದು ಉಣ್ಣುತಲಿರುವಿ ನೋಡೈ
ಮಂದಮತಿ ನೀ ತಿಳಿದು ನಿಜವನು ನಿತ್ಯ ಸುಖಿಯಾಗು।
ನೊಂದುಕೊಳ್ಳದೆ ಹರ್ಷಗೊಳ್ಳದೆ
ಬಂದ ಸುಖದುಃಖದಲಿ ನೀನು
ಒಂದೇ ತೆರನಾಗಿರ್ದು ನಿಜಪಥ ಹಿಡಿದು ಸುಖಿಯಾಗು॥

ಅರಿವಿನೀ ಜನ್ಮಕ್ಕೆ ಬಂದಿಹೆ
ಅರಿತುಕೊ ನಿನ್ನಿಜದ ರೂಪವ
ಮರೆತು ಭವದೊಳು ಬೀಳಬೇಡೈ ಅರಿತು ಸುಖಿಯಾಗು।
ಶರಣುಪೋಗಲು ಭಕ್ತಿಯಿಂ ಗುರು
ಚರಣದಲಿ ನೀ ಶ್ರದ್ಧೆಯಿಂದಲಿ
ಕರುಣೆಯಿಂದಲಿ ಹರಿಸಿ ಪೊರೆವನು ನಿತ್ಯಸುಖಿಯಾಗು॥

ಧರೆಯೊಳುತ್ತಮ ಕಾದರೊಳ್ಳಿಯ
ಪುರದಿ ಶಿವಮಯ ಮಠದೊಳಿರುವಾ
ಪರಮ ಸದ್ಗುರು ಅಪ್ಪದೇವನ ಪಾದಪಂಕಜಕೆ।
ಶರಣು ಪೋಗಲು ಭಕ್ತಿಯಿಂದಲಿ
ಹರಿದು ಅಜ್ಞಾನಾಂಧಃಕಾರವು
ಅರಿವಿನರಿವಾಗುತಲೆ ಭವಹರಿದಾಗುವುದು ಮುಕ್ತಿ॥

೦೭.೧೧.೧೯೭೦

ಮೇಲ್ಕಾಣಿಸಿದ ಕವನಗಳಿಂದ ಶ್ರೀ ಚನ್ನಬಸವ ದೇವರ ಹೃದಯದಲ್ಲಿ ಎದ್ದ ಭಾವತರಂಗಗಳ ಪರಿಚಯವಾಗುತ್ತದೆ. ಶ್ರೀಗಳವರನ್ನು ಬಿಟ್ಟರೆ ಏನೂ ಕಾಣದಂತಾಯಿತು, ಯಾರೂ ಕಾಣದಂತಾದರು. ಶ್ರೀಗಳವರು ತೋರುವ ಮಾರ್ಗದಲ್ಲಿ ನಡೆಯುವದೊಂದೇ ಅವರ ಜೀವಿತೋದ್ದೇಶವಾಯಿತು. ವೃತ್ತಿಯಲ್ಲಿ ವ್ಯಾಪಾರಸ್ಥರು; ನಿಜ, ಪ್ರವೃತ್ತಿಯಲ್ಲಿ ಪಾರಮಾರ್ಥಿಕ ದಿವ್ಯಸಾಧಕರು. ಶ್ರೀಗಳವರ ಮುಖದಿಂದ ಕೇಳಿದ ಪ್ರಸಾದವಾಣಿಯನ್ನು, ತಮ್ಮ ಹೃದಯದಲ್ಲಿ ಅಳುಕದಂತೆ ಸಂರಕ್ಷಿಸಿಕೊಂಡು, ಆಕ್ಷಣದಿಂದಲೇ ಅದನ್ನು ಅನುಷ್ಠಾನಕ್ಕೆ ತರುವಂತಹವರಾಗಿದ್ದರು. ಸಾಧನಾ ಮಾರ್ಗದಲ್ಲಿ ಏನಾದರೂ ಸಂದೇಹ ಸಂಶಯಗಳು ಎದುರಾದಾಗ, ಅದನ್ನು ನೇರವಾಗಿ ಶ್ರೀಗಳವರಲ್ಲಿ ಕೇಳುತ್ತಿರಲಿಲ್ಲ. 'ನಾನು ಅವರಿಗೆ ಶರಣಾಗತನಾದದ್ದು ನಿಜವಾಗಿದ್ದರೆ, ಈ ಸಂದೇಹಕ್ಕೆ ನಾನು ಕೇಳದೇನೇ ಶ್ರೀಗಳು ಸಮಾಧಾನ ಹೇಳುತ್ತಾರೆ. ಮುಮುಕ್ಷುಗಳ ಕಲ್ಯಾಣಾರ್ಥವಾಗಿಯೇ ಆ ಶರೀರ ಉಸಿರಾಡುತ್ತಲಿದೆ', ಎಂಬ ವಿಶ್ವಾಸ ಶ್ರೀಗಳವರ ಮೇಲೆ ಮತ್ತು ತಮ್ಮ ಮೇಲೆ. ಹೀಗೆ ಶ್ರದ್ಧಾ-ವಿಶ್ವಾಸಗಳಿಂದ ತುಂಬಿತುಳುಕುತ್ತ, ಏಕೈಕ ನಿಜ ಆಧಾರವಾದ ಶ್ರೀಗಳವರನ್ನು ಸಂಭ್ರಮದಿಂದ ಕಾಣಲು ಮಠಕ್ಕೆ ಹೋದರೆ, 'ಅಹೋ ವಾಸರು ದೇಖಿಲಿಯಾಚಿ ಸಾಠಿ। ಧೇನು ಖಿಡಬಡೋನಿ ಮೋಹೇ ಉಠೀ।' ಆಕಳು ತನ್ನ ಕರುವನ್ನು ಕಂಡಕೂಡಲೇ ವಾತ್ಸಲ್ಯದಿಂದ ಗಡಬಡಿಸಿ ಎದ್ದು ನಿಲ್ಲುವಂತೆ; ಶ್ರೀ ಚನ್ನಬಸವದೇವರನ್ನು ಕಂಡಕೂಡಲೆ ಶ್ರೀಗಳವರು ಸಂಭ್ರಮಗೊಳ್ಳುವರು. ಪ್ರಸಂಗಾಂತರದಿಂದ ಇವರ ಮನಸ್ಸಿನಲ್ಲಿರುವ ಸಂದೇಹಕ್ಕೆ ಸಮಾಧಾನ ಹೇಳುವರು.

ಈ ರೀತಿ ಪ್ರತಿಸಲದ ಶ್ರೀಗಳವರ ಭೇಟಿಯಿಂದ ಸಮರಸದ ಚಿಂತನಕ್ಕೆ ಒಳಪಟ್ಟು, ನಿಜತತ್ತ್ವದ ನಿಶ್ಚಯವನ್ನು ತಾಳುತ್ತಿದ್ದರು. ಒಂದು ಕ್ಷಣಕೂಡ ಬಹಿರ್ಮುಖ ಪ್ರವೃತ್ತಿ-ಆಸಕ್ತಿ ಎಂಬುವದು ಇಲ್ಲ. ತೀರ ಹತ್ತಿರದ ಒಡನಾಟದಲ್ಲಿರುವ ಶ್ರೀ ನಿಲಜಕರ ಅವರಿಗೆ ಇದು ಕಾಣದೇ ಇರಲಿಲ್ಲ. ಶ್ರೀಗಳವರು ಶ್ರೀ ಚನ್ನಬಸವದೇವರಿಗೆ ಹಾಗೂ ನಿಲಜಕರರವರಿಗೆ ಪಾರಮಾರ್ಥಿಕ ಸಾಧನೆಯ ಉದ್ದೇಶದಿಂದ ಪರಸ್ಪರ ಪೋಷಕವಾಗುವಂತೆ, ಸಾಧ್ಯವಾದಷ್ಟು ಕೂಡಿ-ಜೊತೆಯಲ್ಲಿಯೇ ಇರಲು ಹೇಳಿದರು.

'ಜೇಥ ಏಕ ಏಕಾತೆ ಪೋಖೀ। ಐಸೇ ಬಹುತ ಪದಾರ್ಥ ಯೇಕೀ।' ಪರಸ್ಪರ ಒಬ್ಬರನ್ನೊಬ್ಬರು ಪೋಷಿಸುವದಕ್ಕಾಗಿ ಸದ್ಗುರುವು ಮುಮುಕ್ಷುಗಳನ್ನು ಒಂದೆಡೆ ಕೂಡಿಸುತ್ತಾನೆ. ಮೊದಲಾದರೂ ಇಬ್ಬರೂ ಕೂಡಿಯೇ ಇರುತ್ತಿದ್ದರು. ಈಗ ಶ್ರೀಗಳವರು ಹೇಳಿದ ಮೇಲೆ, ಈ ಕೂಡುವಿಕೆಗೆ ಹೆಚ್ಚಿನ ಬಲ ಬಂದಿತು. ಶ್ರೀ ಚನ್ನಬಸವದೇವರ ಹಾಗೂ ಶ್ರೀ ನಿಲಜಕರರವರ ಪರಿಚಯ ಹೊಸದೇನಲ್ಲ. ಇಬ್ಬರೂ ಅಕ್ಕಪಕ್ಕದ ಗ್ರಾಮದವರು. ಸಮಾನ ವಯಸ್ಕರು-ಸಮಾನ ಮನಸ್ಕರು, ಕೂಡಿ ಕಲಿತವರು-ಕೂಡಿ ಆಡಿದವರು. ಅಷ್ಟೇ ಅಲ್ಲ ಎಷ್ಟೋ ಜನ್ಮದಿಂದ ಕೂಡಿ ಇದ್ದವರು.

ಶ್ರೀಗಳು ಇವರನ್ನು ಮತ್ತೆ ಕೂಡಿಸಿದರು; ನಡುವೆ ಭೇದ ಉಳಿಯದಂತೆ. ಎರಡು ಶರೀರ ಒಂದು ಜೀವ ಎಂಬಂತೆ ಕೂಡಿದರು. ಕಾದ್ರೊಳ್ಳಿಗೆ ಬರುವದಾದರೆ ಕೂಡಿಬರುವರು, ಬೆಳಗಾಂವಿಗೆ ಕೂಡಿಹೋಗುವರು.

ಮೊದಲ ಸಾರಿ ಇವರಿಬ್ಬರೂ ಮಠದಲ್ಲಿ ರಾತ್ರಿ ವಸತಿ ಇರುವವರಿದ್ದರು. ಆಗ ಶ್ರೀಗಳಗವರಿಗೆ ಆದ ಆನಂದವನ್ನು ಅವರಿಗೇ ತಡೆಯಲಾಗುತ್ತಿಲ್ಲ. ಎಲ್ಲರ ಮುಂದೂ ಹೇಳಲಾರಂಭಿಸಿದರು 'ಈ ದಿನ ನಮ್ಮ ಮಠದಲ್ಲಿ ಇಬ್ಬರು ಸಾಧುಗಳು ಇರುವವರಿದ್ದಾರೆ' ಅಂತ. ಅಲ್ಲಿಂದ ಇವರು ಆಗಾಗ ರಾತ್ರಿ ಮಠದಲ್ಲಿಯೇ ತಂಗುತ್ತಿದ್ದರು. ರಾತ್ರಿ ಇವರು ಮಲಗಿದ ಮೇಲೆ ಶ್ರೀಗಳವರು ಇವರು ಮಲಗಿದ ಕಡೆ ಬರುವರು; ನಿಂತು ನೋಡುವರು; ಸರಿದಾಡಿದ ಇವರ ಮೇಲಿನ ಹೊದಿಕೆಯನ್ನು ಸರಿಪಡಿಸುವರು. ನಿಜಬೋಧೆಯ ಜೋಗುಳ ಹಾಡಿ ಚಪ್ಪರಿಸಿ, ಆತ್ಮಸುಖದಲ್ಲಿ ತನ್ನ ಮಕ್ಕಳನ್ನು ಮಲಗಿಸ ಹೊರಟ ನಿಜತಾಯಿಯ ಹೃದಯುವದು. ಆ ಹೃದಯಕ್ಕೆ ಎಂತಹ ಮಮತೆ ಈ ಮಕ್ಕಳ ಮೇಲೆ.

ಶ್ರೀ ಚನ್ನಬಸವದೇವರು ಶ್ರೀಗಳವರಿಗಾಗಿ ಯಾಲಕ್ಕಿ ಒಯ್ಯುತ್ತಿದ್ದರು. ಅದನ್ನು ಶ್ರೀಗಳವರು ಪ್ರಸಾದ ಸ್ವೀಕರಿಸುವಂತೆ, ಆದರದಿಂದ ಸ್ವೀಕರಿಸುವರು. ಕೊಡುವವನ ಭಾವ ಕರಗಿ ನೀರಾಗಬೇಕು. ಮಗ ನಿಸ್ಸೀಮಭಾವ ಉಲ್ಹಾಸೇ। ಮಜ ಅರ್ಪಾವಯಾಚೇನಿ ಮಿಸೇ। ಫಳ ಏಕ ಆವಡೇ ತೈಸೇ। ಭಲತಯಾಚೇ ಹೋ॥ ಭಕ್ತು ಮಾಝಿಯಾಕಡೆ ದಾವೀ। ಆಣೀ ಮೀ ದೋನ್ಹೀ ಹಾತ ವೋಡವೀ। ಮಗ ದೇಟು ನ ಫೇಡಿತಾ ಸೇವೀ। ಆದರೇಶೀ॥ ಪೈ ಭಕ್ತಿ ಏಕೀ ಮೀ ಜಾನೇ। ತೇಥ ಸಾನೇ ಥೋರ ನ ಮ್ಹಣೇ। ಆಮ್ಹೀ ಭಾವಾಚೇ ಪಾಹುಣೇ। ಭಲತೇಯಾ॥ ಜ್ಞಾನೇಶ್ವರೀ.೯-೩೮೨,೩೮೩,೩೯೫ ಯಾವುದೋ ಮರದ ಎಂಥಹುದೋ ಹಣ್ಣನ್ನು ಕೈಯಲ್ಲಿ ಹಿಡಿದು ಪ್ರೇಮೋಲ್ಹಾಸದಿಂದ, ಭಕ್ತನೊಬ್ಬ ಭಗವಂತನಿಗೆ ಅರ್ಪಿಸಲೆಂದು ಮುಂದಾದರೆ, ಅದನ್ನು ಸ್ವೀಕರಿಸಲೆಂದು, ಭಗವಂತನು ತನ್ನ ಎರಡೂ ಕೈಗಳನ್ನು ಮುಂದೆ ಚಾಚುವನು. ಆ ಹಣ್ಣಿನ ಸಿಪ್ಪೆಯನ್ನು ಕೂಡ ಸುಲಿಯದೆ, ಅತೀ ಪ್ರೇಮದಿಂದ ಅದು ಏನು, ಎಂತಹುದು ಎಂಬುದನ್ನೂ ನೋಡದೇ ಬಾಯಿಗಿಟ್ಟುಕೊಳ್ಳುವನು. ಭಗವಂತನು ಕೊಡುವವನ ಭಕ್ತಿಭಾವವೊಂದನ್ನೇ ನೋಡುವನು. ಅದಕ್ಕೂ ಮಿಗಿಲಾದ ಭಾವಸಂಭ್ರಮದಿಂದ ಸ್ವೀಕರಿಸುವನು. ಶ್ರೀ ಚನ್ನಬಸವದೇವರು ಶ್ರೀಗಳವರಿಗೆ ಕೊಡುತ್ತಿರುವುದು ನಾಲ್ಕು ಕಾಸಿನ ಯಾಲಕ್ಕಿ ಆದರೆ ಅವರು ಶಿಷ್ಯನ ಮುಕ್ತ ಸ್ಥಿತಿಯ ಸವಿನೆನಪಿಗಾಗಿ ಆ ಯಾಲಕ್ಕಿಗಳನ್ನು ಕೊನೆಯವರೆಗೆ ಕಾಯ್ದಿಟ್ಟುಕೊಂಡರು.

ಶ್ರೀ ಚನ್ನಬಸವದೇವರು ಹಾಗೂ ಶ್ರೀ ನಿಲಜಕರರವರು ಬೆಳಗಾಂವಿಯಲ್ಲೂ ಕೂಡಿಯೇ ಇರುತ್ತಿದ್ದರು. ಶ್ರೀ ನಿಲಜಕರರಿಗೆ ತಮ್ಮ ನೌಕರಿಯಲ್ಲಿ ಸ್ವಲ್ಪ ಸಮಯ ಸಿಕ್ಕರೆ

ಸಾಕು, ಅಂಗಡಿ ಹತ್ತಿರ ಬರುತ್ತಿದ್ದರು. ಶ್ರೀ ಚನ್ನಬಸವದೇವರು ಅವರನ್ನು ನೋಡಿದರೆ ಅಂಗಡಿಯಿಂದ ಹೊರಬರುತ್ತಿದ್ದರು. ಆಗ ಎಷ್ಟೇ ವ್ಯವಹಾರವಿರಲಿ, ಅದನ್ನು ಅಲ್ಲಿಯೇ ಬಿಟ್ಟು ಹೊರಡುತ್ತಿದ್ದರು. ಎಷ್ಟೋ ಸಾರಿ ಹಣದ ರಾಶಿಯನ್ನು ಮುಂದೆ ಹಾಕಿಕೊಂಡು ಎಣಿಸುತ್ತಿರುವಾಗ, ನಿ: ಲಜಕರರವರು ಅಲ್ಲಿಗೆ ಬಂದರೆ ಹಣವನ್ನು ಸುಮ್ಮನೆ ಬದಿಗೆ ಸರಿಸಿ ಕಾರಕೂನನಿಗೆ 'ಏ ವಿಶ್ವನಾಥ, ಇವನ್ನು ಎಣಿಸಿ ಒಳಗಿಡು' ಎಂದು ಬೀಗದ ಕೈಕೊಟ್ಟು ಹೊರಬಂದಿದ್ದಾರೆ. ಎಣಿಸಿ ಟ್ರೇಸರಿಯಲ್ಲಿ ಇಟ್ಟು ಬರಲು ಎಷ್ಟು ಸಮಯ ಹಿಡಿಯುತ್ತದೆ. 'ಸ್ವಲ್ಪ ನಿಲ್ಲಿ ಬರುತ್ತೇನೆ' ಅಂತ ಹೇಳಬಹುದಾಗಿತ್ತು. ಆದರೆ ಶ್ರೀ ಚನ್ನಬಸವದೇವರು ಹಾಗೆ ಎಂದೂ ಹೇಳಲಿಲ್ಲ- ಹಾಗೆ ಎಂದೂ ಮಾಡಲಿಲ್ಲ. ಪ್ರಪಂಚವನ್ನು ಸಾಧಿಸಲು ಪರಮಾರ್ಥಕ್ಕೆ 'ನಿಲ್ಲು' ಎಂದು ಹೇಳಬೇಕೆ ? ಶಾಶ್ವತ ವಸ್ತುವಿಗಾಗಿ ನಶ್ವರವಾದ ತನು ಮನ ಧನಗಳನ್ನು ಪಣಕ್ಕೊಡ್ಡುವ ಶ್ರೀ ಚನ್ನಬಸವದೇವರು ಪರಮಾರ್ಥಕ್ಕೆ ಸ್ವಲ್ಪ ನಿಲ್ಲು ಎಂದು ಹೇಳುವುದಿರಲಿ ಎದುರಿಗೆ ಬಂದ ಪ್ರಪಂಚವನ್ನು ಸುಮ್ಮನೇ ಬದಿಗೆ ಸರಿಸಿ ಪರಮಾರ್ಥವನ್ನು ಹಿಂಬಾಲಿಸುವಂತಹವರು.

ಶ್ರೀ ಚನ್ನಬಸವದೇವರು ಯಾವುದಾದರೂ ಗ್ರಂಥವನ್ನು ಓದಲು ಕೈಯಲ್ಲಿ ಹಿಡಿದರೆ ಅದನ್ನು ಮುಗಿಸಿಯೇ ಕೆಳಗಿಡುವವರು. ಓದಿಯಾದ ಮೇಲೆ ನಿಲಜಕರರವರೊಂದಿಗೆ ಚರ್ಚಿಸುತ್ತಿದ್ದರು. ವಿಷಯ ಪ್ರತಿಪಾದನೆ, ಮಾತಿನ ಶೈಲಿ ಅತೀ ಸುಂದರ. ಗ್ರಂಥಕರ್ತೃವಿನ ಹೃದಯದಾಳಕ್ಕೆ ಇಳಿದು ಆ ಹೃದಯದ ಭಾವದೆಳೆಗಳನ್ನು ಎಳೆತಂದು ವಿವರಿಸಲಾರಂಭಿಸಿದರೆ, ಸಾಹಿತ್ಯದ ಸೋನೆಯುಕ್ಕಿ ಹರಿಯುವದು. ಕೆಲವು ಕೇಳುಗರಿಗೆ ಇವರ ಮಾತು ಅರ್ಥವಾಗದಿದ್ದರೂ ಇವರ ಮಾತನ್ನು ಕೇಳುತ್ತಲೇ ಇರಬೇಕು; ಹಾವಭಾವ ನೋಡುತ್ತಲೇ ಇರಬೇಕು ಎಂದು ಅನಿಸುತ್ತಿತ್ತು.

ವಾಲಿ ಚೆಂಬಣ್ಣ-ತ್ಯಾಣಗಿ ಡಾಕ್ಟರ್-ಮುಂತಾದ ಕೆಲವರೊಂದಿಗೆ ಮಾತಿಗೆ ಕುಳಿತರೆಂದರೆ ಹರಟೆ. ಸ್ವಭಾವತಃ ಹಾಸ್ಯ ಪ್ರವೃತ್ತಿ ಶ್ರೀ ಚನ್ನಬಸವದೇವರದು. ಇವರು ಹೋದಲ್ಲೆಲ್ಲ ಬಂದಲ್ಲೆಲ್ಲ ಆ ವಾತಾವರಣವನ್ನು ತಮ್ಮ ಹಾಸ್ಯದಿಂದ ತಿಳಿಯಾಗಿಸುವರು. ಜನ ಇವರ ಹಾಸ್ಯ ಪ್ರವೃತ್ತಿಯನ್ನು ಮಾತ್ರ ನೋಡಿದರು. ಆದರೆ ತತ್ತ್ವ ಚಿಂತಕ ಮುಮುಕ್ಷುವಿಗೆ ನಡುಕ ಹುಟ್ಟಬೇಕು; ಅಂತಹ ಗಾಂಭೀರ್ಯ ಅಂತರಾಳದಲ್ಲಿ. ಎಲ್ಲರೊಂದಿಗೆ ಹಾಸ್ಯ ಮಾಡಿದ ಇವರು ಒಂದು ಸಲ ಕೂಡ ಶ್ರೀ ನಿಲಜಕರರವರೊಂದಿಗೆ ಹಾಸ್ಯಮಾಡಲಿಲ್ಲ.

ಬೆಳಗಾಂವಿಯಲ್ಲಿ ದಂಡಗೇ ಶಾಸ್ತ್ರಿಗಳೆಂಬವರು ಶ್ರೀಮತ್ ಶಂಕರಾಚಾರ್ಯರ 'ಶತಶ್ಲೋಕಿ' ಎಂಬ ಗ್ರಂಥವನ್ನು ಕುರಿತು ಪ್ರವಚನ ಮಾಡುತ್ತಿದ್ದರು. ಇವರು ಅಸಾಮಾನ್ಯ ವಿದ್ವಾಂಸರು, ತರ್ಕ ಪಂಡಿತರು, ಸಕಲ ಶಾಸ್ತ್ರಗಳ ಪರಿಚಯವಿದ್ದವರೂ ಆಗಿದ್ದರು. ಶ್ರೀ ಚನ್ನಬಸವದೇವರು ಹಾಗು ಶ್ರೀ ನಿಲಜಕರರವರು ಪ್ರವಚನ ಕೇಳಲು ಹೋಗುತ್ತಿದ್ದರು.

ಕೆಲವು ದಿನಗಳ ನಂತರ ಶ್ರೀ ಚನ್ನಬಸವದೇವರು ಪ್ರವಚನಕ್ಕೆ ಹೋಗುವದನ್ನು ನಿಲ್ಲಿಸಿದರು. ಕಾದ್ರೊಳ್ಳಿಗೆ ಹೋದಾಗ ಶ್ರೀಗಳವರು ಕೇಳಿದರು. "ದಂಡೆಗೆ ಶಾಸ್ತ್ರಿಗಳು ಪ್ರವಚನ ಮಾಡುತ್ತಿದ್ದಾರೆ. ನೀವು ಅಲ್ಲಿಗೆ ಹೋಗುತ್ತಿದ್ದೀರೋ ಇಲ್ಲವೋ" ಅಂತ. ಅದಕ್ಕೆ ಶ್ರೀ ಚನ್ನಬಸವದೇವರು "ಹೇಳುವವರಿಗೇ ನಿಶ್ಚಯ ಜ್ಞಾನವಿಲ್ಲ ಅದಕ್ಕೇ ನಾನು ಹೋಗುವದನ್ನು ಬಿಟ್ಟಿದ್ದೇನೆ" ಎಂದು ಹೇಳಿದರು. ಆಗ ಶ್ರೀಗಳವರು "ಹಾಗಾದರೆ ನೀನೇನು ಅಲ್ಲಿಗೆ ಹೋಗಬೇಕಾಗಿಲ್ಲ" ಎಂದರು.

ವ್ಯರ್ಥ ಸಂಶಯಾಚೀ ಪೋಥೀ। ವ್ಯರ್ಥ ಸಂಶಯಾಚೀ ವ್ಯುತ್ಪತ್ತೀ। ವ್ಯರ್ಥ ಸಂಶಯಾಚೀ ಗತೀ। ನಿಶ್ಚಯೇ ವಿನ॥(ದಾಸಬೋಧ) ನಿಶ್ಚಯ ಜ್ಞಾನವಿಲ್ಲದವನ ಸಂಶಯಯುಕ್ತ ಗ್ರಂಥ–ವ್ಯುತ್ಪತ್ತಿ–ಗತಿ ಎಲ್ಲವೂ ವ್ಯರ್ಥ. ಸದ್ಗುರುವಿನ ಆಶ್ರಯವಿಲ್ಲದೇ ಅಪಾರ ಗ್ರಂಥ ರಾಶಿಯನ್ನು ಅಭ್ಯಾಸ ಮಾಡಿ, ಕಂಠ ಪಾಠ ಮಾಡಿರಬಹುದು. ಅದು ಸ್ಮೃತಿ; ಜ್ಞಾನವಲ್ಲ. ಗುರುಪೀಠದ ಮೇಲೆ ಪ್ರಾರಬ್ಧಾನುಸಾರವಾಗಿ ಆರೂಢನಾಗಿರಬಹುದು ಅದು ಭೋಗ; ಜ್ಞಾನವಲ್ಲ. ಮುಕ್ತಿಯನ್ನು ನೀಡುವುದು ಶಾಸ್ತ್ರವಲ್ಲ, ಜ್ಞಾನ–ಅನುಭವವು ಮುಕ್ತಿಯನ್ನು ನೀಡುವುದು. ಜ್ಞಾನವನ್ನು ನಾವು ಮೂಡಿಸಿಕೊಳ್ಳಬೇಕು. ಶಾಸ್ತ್ರವು, ಅನುಭವವನ್ನು– ಜ್ಞಾನವನ್ನು ನೀಡಲಾರದು. ಜ್ಞಾನವನ್ನು ಮೂಡಿಸಿಕೊಂಡಾಗಲೇ ಶಾಸ್ತ್ರವು ಸಾರ್ಥಕವಾಗುವದು. ಶಾಸ್ತ್ರವು ಜ್ಞಾನವನ್ನು ನೀಡಲಾರದು–ಸಿದ್ಧಾಂತವನ್ನು–ನಿಯಮಗಳನ್ನು ನೀಡಬಲ್ಲದು. ಸದ್ಗುರುವಿನ ಆಶ್ರಯದಲ್ಲಿ ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತ, ತನ್ನ ಜೀವನದಲ್ಲಿ ಪ್ರತಿ ಹೆಜ್ಜೆ–ಹೆಜ್ಜೆಗೆ ಸ್ವಾನುಭವದ ಇರುವಿಕೆಯನ್ನು, ತನ್ನದೇ ಆದ ನಿಜಸ್ಥಿತಿಯನ್ನು ಅನುಭವಿಸುತ್ತ ನಡೆದ ಶ್ರೀ ಚನ್ನಬಸವದೇವರು ಶಾಸ್ತ್ರಪಾಂಡಿತ್ಯಕ್ಕೆ ಹೇಗೆ ಮರುಳಾದಾರು?

ಮುಂದೆ ನವರಾತ್ರಿಯ ಸಂದರ್ಭದಲ್ಲಿ ವಾಲಿ ಚಂಬಣ್ಣ ಹಾಗು ಶ್ರೀ ಚನ್ನಬಸವದೇವರು ಕೂಡಿಕೊಂಡು, ಶ್ರೀಗಳವರಿಗೆ ಭಗವದ್ಗೀತೆಯನ್ನು ವಿವರಿಸಬೇಕೆಂದು ಕೇಳಿಕೊಂಡರು. ಕರುಣಾಮೂರ್ತಿಗಳಾದ ಶ್ರೀಗಳವರು ಒಪ್ಪಿಗೆ ನೀಡಿ, ಭಗವದ್ಗೀತೆಯನ್ನು ವಿವರಿಸಲಾರಂಭಿಸಿದರು. ಶ್ರೀಗಳವರದು ಅದೆಂಥಹ ನಿಖರತೆ–ಸ್ಪಷ್ಟತೆ. ಸ್ವತಃ ಶ್ರೀ ಕೃಷ್ಣಪರಮಾತ್ಮನಲ್ಲದೇ ಬೇರೆ ಇನ್ನಾರು ಇಷ್ಟು ಜೀವಂತಿಕೆಯಿಂದ ಗೀತೆಯನ್ನು ಉಪದೇಶಿಸಲು ಸಾಧ್ಯ? "ಅಂದು ಅರ್ಜುನನಿಗೆ ಶ್ರೀಕೃಷ್ಣಪರಮಾತ್ಮನಾಗಿ ಗೀತೆಯನ್ನು ಬೋಧಿಸಿದವರು ಇವರೇ" ಎಂಬುವುದು ಶ್ರೀ ಚನ್ನಬಸವದೇವರಿಗೆ ದೃಢವಾಯಿತು. ಗುರೋಸ್ತು ಮೌನಂ ವ್ಯಾಖ್ಯಾನಂ। ಶಿಷ್ಯಾಸ್ತು ಛಿನ್ನ ಸಂಶಯಾ: ಎಂಬಂತೆ ಶ್ರೀಗಳವರು ಸುಮ್ಮನೆ ಕೆಮ್ಮಿದರೂ, ಅಳುಗಾಡಿದರೂ, ಸುಮ್ಮನೆ ಕುಳಿತರೂ ಅದು ಎಲ್ಲವೂ ಮುಮುಕ್ಷುಗಳಿಗೆ ಬೋಧಸ್ವರೂಪವಾಗುತ್ತಲಿರುವಾಗ, ಈಗ ಶ್ರೀಕೃಷ್ಣ ಪರಮಾತ್ಮನ ಪ್ರತಿಅವತಾರವೋ!

ಎಂಬಂತೆ ಶ್ರೀಗಳವರು ಭಗವದ್ಗೀತೆಯನ್ನು ಬೋಧಿಸುತ್ತಿರುವಾಗ, ಆ ಬೋಧದಲ್ಲಿ ಕೇಳುವವ ಕರುಗ ತೊಡಗಿದ. ಕಾಲದ ಪರಿವೆ ಇಲ್ಲ. ಹಗಲು-ರಾತ್ರಿ ಹೇಗೆ ಸರಿದು ಹೋಗುತ್ತಿವೆಯೋ ಏನೋ.

ಆರನೆಯ ಅಧ್ಯಾಯ-ಯೋಗಭ್ರಷ್ಟನ ವಿಷಯ ನಡೆದಿದೆ. ಯೋಗಭ್ರಷ್ಟನ ವಿಷಯವಾಗಿ ಶ್ರೀ ಚನ್ನಬಸವದೇವರು ಏನೋ ಒಂದು ಪ್ರಶ್ನೆ ಕೇಳಿದರು. "ಅದೆಲ್ಲ ನಿನಗೇಕೆ? ಸುಮ್ಮನೆ ಈಗ ಹೇಳುವದನ್ನು ಕೇಳು" ಎಂದರು ಶ್ರೀಗಳು. ಶ್ರೀಗಳವರಿಗೆ ತಿಳಿದಿತ್ತು, ಇದೇ ಇವನ ಕೊನೆಯ ಜನ್ಮವೆಂಬುದು. 'ನನ್ನ ಮನಸ್ಸಿನಲ್ಲಿ ಎದ್ದ ಯಾವುದೇ ಸಂದೇಹ-ಸಂಶಯಗಳಿಗೂ ಶ್ರೀಗಳವರು ಸಮಾಧಾನ ಹೇಳದೇ ಬಿಟ್ಟಿಲ್ಲ. ಈಗ ನಾನು ಪ್ರತ್ಯಕ್ಷ ಕೇಳುತ್ತಿದ್ದರೂ ಸುಮ್ಮನೆ ಕೇಳು ಅದೆಲ್ಲ ನಿನಗೇಕೆ?' ಎನ್ನುತ್ತಿದ್ದಾರೆ. "ಸುಮ್ಮನೆ ಎಂದರೆ ನನ್ನ ಎಲ್ಲ ಜವಾಬ್ದಾರಿಯನ್ನು ಅವರಿಗೆ ಕೊಡುವದು" ಎಂದು ಭಾವಿಸುತ್ತ ಶ್ರೀ ಚನ್ನಬಸವದೇವರು ಏನೆಲ್ಲವನ್ನು ಮರೆತು ಎಲ್ಲ ಚಿಂತೆಗಳನ್ನು ಬದಿಗೆ ಸರಿಸಿ, ಶ್ರೀಗಳವರ ಬೋಧಾಮೃತವು ಹೃದಯವನ್ನು ಪ್ರವೇಶಿಸಲು ಅನುವಾಗುವಂತೆ, ಹೃದಯದ ಬಾಗಿಲನ್ನು ತೆರೆದಿಟ್ಟು ಕೇಳತೊಡಗಿದರು. ಕೇಳುವದೆಂದರೆ ಕೇವಲ ಕೇಳುವದಲ್ಲ; ಆ ಸ್ಥಿತಿಯಲ್ಲಿ ನೆಲೆ ನಿಲ್ಲತೊಡಗಿದರು. ಕಾನಾ ವಚನಾಚಿಯೇ ಭೇಟೀ। ಸರಿಸಾಚಿ ವಸ್ತು ಹೋವೂನಿ ಉಠೀ (ಜ್ಞಾನೇಶ್ವರೀ ೧೮-೯೮೯) ಮಹಾವಾಕ್ಯ ಕಿವಿಗೆ ಅಪ್ಪಳಿಸುತ್ತಿದ್ದಂತೆಯೇ ಪರಬ್ರಹ್ಮವಸ್ತುವಾಗಿಯೇ ಎದ್ದರು. ಶ್ರೀಗಳವರ ಕೃಪಾರೂಪದಲ್ಲಿ ಹೊರಹೊಮ್ಮಿದ ಬೋಧಾಮೃತಧಾರೆಯು ಪರಿಪಕ್ವ ಅಂತಃಕರಣದಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿಸಿತು.

ನಷ್ಟೋಮೋಹಃ ಸ್ಮೃತಿರ್ಲಬ್ಧಾ। ತ್ವತ್ಪ್ರಸಾದಾನ್ಮಯಾಚ್ಯುತ॥
ಸ್ಥಿತೋಸ್ಮಿ ಗತಸಂದೇಹಃ। ಕರಿಷ್ಯೇ ವಚನಂ ತವ॥ ಗೀತಾ ೧೮-೭೩

"ನಿನ್ನ ದಯೆಯಿಂದ ನನ್ನ ಮೋಹವು ತೊಲಗಿತು; ಜ್ಞಾನವುಂಟಾಯಿತು; ಸಂದೇಹ ನಿವೃತ್ತಿಯಾಯಿತು" ಎಂಬ ಅರ್ಜುನನ ಸ್ಥಿತಿ ಶ್ರೀ ಚನ್ನಬಸವದೇವರದು.

ಶ್ರೀಗಳವರ ಪಾದ ಪೂಜೆ ಪ್ರಾರಂಭವಾಯಿತು. ಶ್ರೀ ಚನ್ನಬಸವದೇವರು ಶ್ರೀಗಳವರಿಂದ ಅಪ್ಪಣೆ ಪಡೆದು, ಮಂಗಲವೊಂದನ್ನು ರಚಿಸಿ ಹಾಡಿದರು.

ಬೆಳಗಿರಾರತಿ ಮಂಗಳಾರತಿ ಅಪ್ಪಸದ್ಗುರು ದೇವದೇವಗೆ
ನಿಗಮ ಗೋಚರ ನಿತ್ಯನಿರ್ಮಲ ನಿರ್ಗುಣಾತ್ಮನಿಗೆ
ನಿತ್ಯಸುಖದಾನಂದರೂಪಗೆ
ಸಚ್ಚಿದಾನಂದ ಸ್ವರೂಪಗೆ
ಶಂಭುಲಿಂಗಾನಂದ ಸದ್ಗುರುನಾಥನಡಿಗಳಿಗೆ।
ಭವದಿ ಬಳಲುವ ಭಕ್ತ ಜನರನು
ಕರೆದು ಕರುಣದಿ ಉಣಿಸಿ ಮುದದಲಿ
ಪೊರೆವ ಅನುಪಮದಮರ ಜ್ಯೋತಿಗೆ ಬೆಳಗಿರಾರತಿಯ॥

ಭವಭವಾಂತದಿ ಬಳಲಿ ಬೇರಿ-
ನ್ನೇನು ಬಯಿಸದ ಭಕ್ತರಂ ಬಿಗಿ-
ದಪ್ಪಿ ಮರೆದರುಸನ್ನೆ ಬೋಧಿಸಿ ಅರಿವಿನೊಳು ತಂದು।
ಬಯಲಿನೊಳು ಬಯಲಾಗಿ ಮೆರೆಯುವ
ಅರಿವಿನೊಳು ಅರಿವಾಗಿ ಬೆಳಗುವ
ಪರಮ ಗತಿಯನು ಮೀರಿ ಮುಳುಗಿದ ಪರಮ ಗುರುವರಗೆ॥

ಪರಮ ತತ್ತ್ವದ ಸಾರಸುಧೆಯನು
ಪರಿಪರಿಯ ಬಗೆಯಾಗಿ ಬೋಧಿಸಿ
ಪರತರಾನಂದರುವೆ ನೀನೆಂದರುಹಿದಪ್ಪನಿಗೆ।
ಅರಿವಿನಾರತಿ ಬೆಳಗಿರಾರತಿ
ಆರದಾರತಿ ನಿರ್ಮಲಾರತಿ
ಶರಣು ಶರಣೆಂದೆನುತ ಬೆಳಗಿರಿ ಮಂಗಲಾರತಿಯ॥

ವಿಜಯದಶಮಿ- ೨೯.೦೯.೧೯೭೧

ಶ್ರೀ ಚನ್ನಬಸವದೇವರು ಶರಣು ಶರಣೆಂದೆನುತ, ಗುರುದೇವ ಅಪ್ಪನ ಪಾದಗಳಿಗೆರಗಿ, ಕರಗಿ, ಹರಡಿ ಹರವಾಗಿ, ಹರಸಾಗಿ ಎದ್ದರು ನಿತ್ಯಸ್ವರೂಪರಾಗಿ.

ಬುದ್ಧಿ ಮನ ಚಿತ್ತಹಂಕಾರ ನಾನಲ್ಲ.
ಕಣ್ಣು ಕಿವಿ ಮೂಗಲ್ಲ, ನಾಲಗೆಯುಮಲ್ಲ।
ನಭವಲ್ಲ, ಧರೆಯಲ್ಲ, ಶಿಖಿವಾಯುವಲ್ಲ
ಚಿದಾನಂದ ರೂಪ ಶಿವ ನಾನು ನಾನು॥

ಪಂಚವಾಯುಗಳಲ್ಲ, ಪ್ರಾಣನಾನಲ್ಲ
ಸಪ್ತಧಾತುಗಳಲ್ಲ, ಕೋಶವೈದಲ್ಲ।
ಕರ್ಮಾಂಗವಿಷಯೇಂದ್ರಿಯಂಗಳಾನಲ್ಲ
ಚಿದಾನಂದ ರೂಪ ಶಿವ ನಾನು ನಾನು॥

ದ್ವೇಷರಾಗಗಳಿಲ್ಲ, ಲೋಭಮೆನಗಿಲ್ಲ
ಮೋಹಮದಮಾತ್ಸರ್ಯಭಾವಮೆನಗಿಲ್ಲ।
ಧರ್ಮಾರ್ಥಕಾಮಾದಿಮೋಕ್ಷ ನಾನಲ್ಲ
ಚಿದಾನಂದ ರೂಪ ಶಿವ ನಾನು ನಾನು॥

ಪಾಪಪುಣ್ಯಗಳಿಲ್ಲ ಸುಖದುಃಖವಲ್ಲ,
ಮಂತ್ರತೀರ್ಥಗಳಲ್ಲ, ವೇದಮಖವಲ್ಲ।
ಭೋಜ್ಯಭೋಜನವಲ್ಲ, ಭೋಕ್ತೃನಾನಲ್ಲ
ಚಿದಾನಂದ ರೂಪ ಶಿವ ನಾನು ನಾನು॥

ಜಾತಿ ಭೇದಗಳಿಲ್ಲ, ಮೃತ್ಯುಭಯವಿಲ್ಲ
ಜನ್ಮಮೃತ್ಯುಗಳಿಲ್ಲ, ತಂದೆತಾಯಿಲ್ಲ।

ಬಂಧುಸಖರಿಲ್ಲ, ಗುರುಶಿಷ್ಯರಾರಿಲ್ಲ
ಚಿದಾನಂದ ರೂಪ ಶಿವ ನಾನು ನಾನು॥

ನಿರ್ವಿಕಾರನು ನಾ, ನಿರಾಕಾರ ನಾನು
ಸರ್ವೇಂದ್ರಿಯಾತೀತ ಸರ್ವತ್ರ ನಾನು।
ಕಾಲದೇಶಾತೀತ ವಿಶ್ವವಿಭು ನಾನು
ಚಿದಾನಂದ ರೂಪ ಶಿವ ನಾನು ನಾನು॥

ಅದು ಹೇಗೋ ಏನೋ, ಈ ಒಂಭತ್ತು ದಿನಗಳಲ್ಲಿ ಶ್ರೀ ನಿಲಜಕರರವರಿಗೆ ಕಾದ್ರೊಳ್ಳಿ ಕಡೆಗೆ ಬರಲಾಗಲಿಲ್ಲ. ಶ್ರೀ ಚನ್ನಬಸವದೇವರೂ ಬೆಳಗಾಂವಿಗೆ ಹೋಗಲಿಲ್ಲ. ಇಲ್ಲಿ ಶ್ರೀಗಳವರು ಭಗವದ್ಗೀತೆಯನ್ನು ಬೋಧಿಸುತ್ತಿರುವುದು, ಅಲ್ಲಿ ಶ್ರೀ ನಿಲಜಕರರವರಿಗೆ ತಿಳಿಯಲಿಲ್ಲ. ಆದರೆ ಶ್ರೀಗಳವರು ದಿನವೂ 'ಅವರೂ ಇದ್ದರೆ ಚೆನ್ನಾಗಿರುತ್ತಿತ್ತು' ಎಂದು ಅವರ ನೆನಪು ತೆಗೆಯುತ್ತಿದ್ದರು. ಶ್ರೀಗಳವರು ಯಾವ ದಿನ ಭಗವದ್ಗೀತೆಯನ್ನು ಬೋಧಿಸಲು ಪ್ರಾರಂಭಿಸಿದರೋ, ಆ ದಿನ ಶ್ರೀ ನಿಲಜಕರರವರಿಗೆ ಭಗವದ್ಗೀತೆಯನ್ನು ಓದಬೇಕು ಎಂಬ ಇಚ್ಛೆಯಾಯಿತು. ಕೊಂಡು ತಂದು ಒಬ್ಬರೇ ಓದಲಾರಂಭಿಸಿದರು. ಇಲ್ಲಿ ಯಾವ ದಿನ ಎಷ್ಟು ಶ್ಲೋಕಗಳು ವಿವರಿಸಲ್ಪಡುತ್ತಿದ್ದವೋ, ಅಷ್ಟೇ ಶ್ಲೋಕಗಳನ್ನು ಓದುತ್ತಿದ್ದರು. ಓದಲೆಂದು ಒಮ್ಮೆ ಗ್ರಂಥವನ್ನು ಕೈಗೆತ್ತಿಕೊಂಡರೆ ಕೆಳಗೆ ಇಡಲು ಮನಸ್ಸಾಗುತ್ತಿಲ್ಲ. ನವಮಿಯ ದಿನ ಗ್ರಂಥವನ್ನು ಮುಗಿಸಿದರು.

ದಶಮಿಯ ಸಾಯಂಕಾಲ ಶ್ರೀ ಚನ್ನಬಸವದೇವರು ಬೆಳಗಾಂವಿಗೆ ಬಂದರು. ಕಾದ್ರೊಳ್ಳಿಯಲ್ಲಿ ಶ್ರೀಗಳವರು ಭಗವದ್ಗೀತೆಯನ್ನು ಬೋಧಿಸಿದ್ದನ್ನು ವಿವರವಾಗಿ ವಿವರಿಸಲಾರಂಭಿಸಿದರು. ಹೇಳುತ್ತ ಹೇಳುತ್ತ, "ಅಂದು ಅರ್ಜುನನಿಗೆ ಶ್ರೀಕೃಷ್ಣಪರಮಾತ್ಮನಾಗಿ ಗೀತೆಯನ್ನು ಬೋಧಿಸಿದವರು ಇವರೇ ಎಂಬುದು ನನಗೆ ದೃಢವಾಯಿತು. ಆಗ ಅರ್ಜುನನಿಗೆ, ನನಗಿಂದು ಸ್ಪಷ್ಟವಾದಂತೆ ಸ್ಪಷ್ಟವಾಯಿತೋ ಇಲ್ಲವೋ" ಎಂದು ತಮಗಾದ ನಿಶ್ಚಯದ ದೃಢತೆಯನ್ನು ಪ್ರಕಟಿಸಿದರು.

"ನಾನೂ ಕೂಡ ಭಗವದ್ಗೀತೆಯನ್ನು ಆಯಾ ದಿನ ಅಷ್ಟಷ್ಟೇ ಶ್ಲೋಕಗಳನ್ನು ಓದಿರುವೆ" ಎಂದು ಶ್ರೀ ನಿಲಜಕರರವರು ಇಲ್ಲಿ ನಡೆದ ವೃತ್ತಾಂತವನ್ನು ಹೇಳಿದರು. ಶ್ರೀಗಳವರು ಅಲ್ಲಿ ಮಾಡಿದ ಸ್ಮರಣೆಯ, ಕರುಣೆಯ ಪರಿಣಾಮವಿದು. ಕೂರ್ಮಕಿಶೋರನ್ಯಾಯವೆಂದರೆ ಇದೆ ಅಲ್ಲವೆ? ಶ್ರೀಗಳವರು ಯಾವ ಯಾವ ರೀತಿಯಾಗಿ ತಮ್ಮನ್ನು ಅನುಗ್ರಹಿಸುತ್ತಿರುವರು

ಎಂದೆಲ್ಲ ಯೋಚಿಸಿ ಇಬ್ಬರೂ ಭಾವಪರವಶರಾದರು.

ಶ್ರೀಗಳವರ ಮುಖದಿಂದ ಭಗವದ್ಗೀತೆಯನ್ನು ಶ್ರವಣ ಮಾಡಿದ ನಂತರ, ಹೀಗೇ ವ್ಯವಹಾರ ನಿಮಿತ್ತದಿಂದ ಶ್ರೀ ಚನ್ನಬಸವದೇವರವರು ಶ್ರೀ ನಿಲಜಕರರವರೊಂದಿಗೆ ಕೂಡಿಕೊಂಡು ಕರಡಿಗುದ್ದಿ ಎಂಬ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ಯಾರದೋ ಹೊಲದಲ್ಲಿ, ಗುಡಿಸಲೊಂದರಲ್ಲಿ ಕುಳಿತುಕೊಂಡಿದ್ದಾರೆ.

ಸುತ್ತೆಲ್ಲ ಮರದ ನೆರಳು. ತಣ್ಣಗೆ ಸುಳಿದೋಡುವ ತಂಗಾಳಿ. ನೋಡಿದಡೆಲ್ಲೆಲ್ಲ ಹಚ್ಚನೆಯ ಹಸಿರಾದ ಪ್ರಕೃತಿಯ ಸೊಬಗು. ಎದುರಿಗೆ ಸೂರ್ಯಾಸ್ತಮಾನವಾಗುತ್ತಲಿದೆ. ದಿನವೆಲ್ಲ ದುಡಿದು, ವಿಶ್ರಾಂತಿಗೆ ಹೊರಟ ಸೂರ್ಯದೇವನನ್ನು ಬೀಳ್ಕೊಡುವದಕ್ಕಾಗಿ, ಆಗಸವೆಲ್ಲ ನಾಚಿ ಕೆಂಪಾಗಿ ಆರತಿ ಎತ್ತಿದೆ. ಕೆಂಪಾದ ಆಗಸದ ಹಿನ್ನೆಲೆಯಲ್ಲಿ ಹಾರುತ್ತಲಿದೆ ಬೆಳ್ಳನೆಯ ಬೆಳ್ಳಕ್ಕಿಗಳ ಸಾಲು.

ಈ ಎಲ್ಲ ಪ್ರಕೃತಿಯ ಸೊಬಗನ್ನು ನೋಡಿದ ಶ್ರೀ ಚನ್ನಬಸವ ದೇವರ ಕವಿಹೃದಯ ಅರಳಿತು. ಇಂತಹುದೇ ಪರಿಸರದಲ್ಲಿ ಆಶ್ರಮವೊಂದನ್ನು ಮಾಡುವ ಇಚ್ಛೆಯಾಯಿತು. ಹೇಳಿಯೂ ಬಿಟ್ಟರು.“ನಾವು ಒಂದು ಆಶ್ರಮ ಮಾಡೋಣ. ಈವತ್ತಿನಿಂದ ಮೂರು ತಿಂಗಳು ಅಡ್ಡಾಡಿ ಬರಬೇಕಾದ ಹಣವನ್ನು ವಸೂಲು ಮಾಡೋಣ. ನಂತರ ಮಾಡುವುದು ಬೇಡ. ಎಷ್ಟು ಬರುತ್ತದೆಯೋ ಅಷ್ಟು ನಮ್ಮದು; ಉಳಿದದ್ದು ಅವರದು. ಅಂಗಡಿ ಮುಚ್ಚಿಬಿಡೋಣ”. ಅದೇ ಪ್ರಕಾರ ಮರುದಿನದಿಂದಲೇ ಶ್ರೀ ನಿಲಜಕರರವರನ್ನು ಕರೆದುಕೊಂಡೇ ನಿರ್ಧರಿಸಿದ ಕಾರ್ಯವನ್ನು ಪ್ರಾರಂಭಿಸಿದರು. ಅದೇ ಸಮಯದಲ್ಲಿ ಬೆಳೆಗಳ ಧಾರಣೆ ಬಿದ್ದು ರೈತರಿಗೆ ಹಾನಿಯಾಗುವ ಸಂದರ್ಭ ಬಂದಾಗ, ತಮ್ಮ ಕೈಯಿಂದ ಹೆಚ್ಚಿನ ಹಣವನ್ನು ರೈತರಿಗೆ ಕೊಡಲಾರಂಭಿಸಿದರು. “ಜೋಡೋನಿಯಾ ಧನ ಉತ್ತಮ ವ್ಯವಹಾರೇ। ಉದಾಸ ವಿಚಾರೇ ವೇಚಕರಿ।” ವ್ಯವಹಾರದಲ್ಲಿ ವ್ಯಾವಹಾರಿಕ ಬುದ್ಧಿಯೇ ಇಲ್ಲ.

ಹೃದಯದಲ್ಲಿ ಗುರುಮೂರ್ತಿಯ ಧ್ಯಾನ.
ಆ ಗುರುವಿನ ಹೃದಯಾಕಾಶ ಇವರ ರಕ್ಷಾ ಕವಚ.
ನಿತ್ಯ ನಿರಂಜನ ವಿದೇಹದ ಅನುಭವ.
ಧನ್ಯತೆಯ ಸಮೃದ್ಧ ಭಾವ
ಮಡುಗಟ್ಟಿನಿಂತ ಜೀವನ ಸಾಗುತ್ತಿದೆ.

ಸದಾತ್ಮನಿ ಬ್ರಹ್ಮಣಿ ತಿಷ್ಠತೋ ಮುನೇಃ

ಪೂರ್ಣಾದ್ವಯಾನಂದಮಯಾತ್ಮನಾ ಸದಾ

ನ ದೇಶಕಾಲಾದ್ಯುಚಿತಪ್ರತೀಕ್ಷಾ

ತ್ವಙ್ಮಾಂಸವಿಟ್‌ಪಿಂಡವಿಸರ್ಜನಾಯ

ವಿವೇಕ ಚೂಡಾಮಣಿ–೫೫೮.

ತನ್ನ ನಿಜಸ್ಥಿತಿಯಾದ

ಪರಬ್ರಹ್ಮದಲ್ಲಿ ನೆಲೆನಿಂತಿರುವ

ಪೂರ್ಣ, ಅದ್ವಯ, ಆನಂದಮಯನಾದ ಮುನಿಯು

ರಕ್ತಮಾಂಸಮಯವಾದ ಶರೀರವನ್ನು ಎಸೆಯಲು

ಉಚಿತ ದೇಶಕಾಲಗಳ

ಪ್ರತೀಕ್ಷೆ ಮಾಡಲಾರ.

ಗಹನಾ ಕರ್ಮಣೋ ಗತಿಃ

ಕರ್ಮದ ಗತಿ ಅತೀ ವಿಚಿತ್ರ. ಶರಶಯ್ಯೆಯಲ್ಲಿ ಮಲಗಿದ ಭೀಷ್ಮ ಪಿತಾಮಹ "ನಾನು ಜನ್ಮದಾರಭ್ಯ ಇಲ್ಲಿಯವರೆಗೆ ಯಾವ ಜೀವಿಗೂ ಶರೀರದಿಂದಾಗಲೀ, ವಾಣಿಯಿಂದಾಗಲೀ, ಮನಸ್ಸಿನಿಂದಾಗಲೀ ಹಿಂಸೆಕೊಟ್ಟವನಲ್ಲ. ಇಂತಹ ನನಗೆ, ಈಗ ಈ ಪರಿಯ ಹಿಂಸೆಯಿಂದೊಡಗೂಡಿದ ಮೃತ್ಯು ಪ್ರಾಪ್ತವಾಗಿದೆಯಲ್ಲ! ಏನಿರಬಹುದು ನನ್ನ ಪ್ರಾರಬ್ಧ" ಎಂದು ಯೋಚಿಸುತ್ತಾನೆ. ಸೂಕ್ಷ್ಮಕ್ಷಮತೆಯ ಆ ಭೀಷ್ಮ ಪಿತಾಮಹನು ತನ್ನ ಯೋಗಬಲದಿಂದ, ಕಳೆದ ಎಪ್ಪತ್ತೊಂದನೆಯ ಜನ್ಮದಲ್ಲಿ, ಭೀಷ್ಮ ಪಿತಾಮಹನು ಆಗ ಇನ್ನೂ ಬಾಲಕ, ರಾಜಕುವರ ಬೇಟೆಗೆಂದು ಹೊರಟಿದ್ದ. ದಾರಿಗೆ ಅಡ್ಡವಾಗಿ ಒಂದು ಓತಿಕಾಟ ಬಿದ್ದಿತ್ತು. ವಯಸ್ಸಿನ ಚಪಲತೆಗೆ ಒಳಗಾಗಿ ಕೈಯಲ್ಲಿನ ಬಾಣದಿಂದ ಅದನ್ನು ಚಿಮ್ಮಿ ಒಗೆದು ಮುಂದೆ ನಡೆದಿದ್ದ. ಆಗ ಆ ಓತಿಕಾಟವು, ಪಡಗಳ್ಳಿ ಎಂಬ ಕಂಟಿಯ ಮೇಲೆ ಬಿದ್ದು, ದೇಹವೆಲ್ಲ ಮುಳ್ಳುಗಳು ಚುಚ್ಚಿ ಗಾಯವಾಗಿ ಅಸುನೀಗಿತ್ತು. ಅದರ ಫಲವಿದು ಎಂದು ಕಂಡುಕೊಂಡ.

ಈ ಪ್ರಾರಬ್ಧವೆಂಬುವುದು ಒಂದೇ ಜನ್ಮದ ಕರ್ಮಫಲವಲ್ಲ; ಹಿಂದಿನ ಸಮಸ್ತ ಜನ್ಮದ ಕರ್ಮಫಲವದು. ಪ್ರಾರಬ್ಧದ ಗತಿ ಹೀಗೇ ಎಂದು ಹೇಳಲು ಬರುವದಿಲ್ಲ. ಸ್ವತಃ ಶ್ರೀಕೃಷ್ಣಪರಮಾತ್ಮ, ಬೇಟೆಗಾರನೊಬ್ಬನ ಬಾಣದ ಆಘಾತದಿಂದ ದೇಹತ್ಯಜಿಸಬೇಕಾಯಿತು. ಕರ್ಮದ ವಿಚಿತ್ರ ಗತಿಗನುಸಾರವಾಗಿ, ಕೊಲೆನಿಮಿತ್ತದಿಂದ ಶ್ರೀ ಚನ್ನಬಸವದೇವರವರ ಶರೀರ ಪಾತವಾಗಬೇಕಾಯಿತು.

ನಮ್ಮ ಅಜ್ಜ-ಹೆಸರು ಕಲ್ಲಪ್ಪ, ಊರೊಳಗೆ ಪುಢಾರಿ, ದರ್ಪಿಷ್ಠ. ಬಡ್ಡಿ ವ್ಯವಹಾರ ಮಾಡಿತ್ತಿದ್ದ. ವ್ಯವಹಾರದಲ್ಲಿ ಕೆಲವರೊಡನೆ ನಿಷ್ಠುರತನದಿಂದ ವರ್ತಿಸಿದ. ಈ ನಿಷ್ಠುರತನ ಕೆಲವರೊಡನೆ ವೈರತ್ವವಾಗಿ ಪರಿಣಮಿಸಿತು. ಕುಹಕಿಗಳು ನಮ್ಮ ಮನೆತನದ ಅಭ್ಯುದಯವನ್ನು ಸಹಿಸಲಾರದವರಾದರು. ಕಲ್ಲಪ್ಪನ ಕೊಲೆಮಾಡಲು ಇಚ್ಛಿಸಿದರು. ವಯಸ್ಸಾದ ಕಲ್ಲಪ್ಪನನ್ನು ಕೊಲೆಮಾಡುವದರಿಂದ ಮನೆತನಕ್ಕೆ ಅಂತಹ ಹಾನಿಯಾಗುವುದಿಲ್ಲ. ಆದರ ಬದಲಾಗಿ ಶ್ರೀ ಚನ್ನಬಸವದೇವರವರ ಕೊಲೆಮಾಡಿದರೆ ಕಲ್ಲಪ್ಪನು ಹಲ್ಲುಕಿತ್ತ ಹಾವಾಗುತ್ತಾನೆ, ಮನೆತನ ಹಾಳಾಗುತ್ತದೆ - ಎಂದೆಲ್ಲ ಯೋಚಿಸತೊಡಗಿದರು. ಕಲ್ಲಪ್ಪನ ಈ ಯಾವ ವ್ಯವಹಾರಕ್ಕೂ ಶ್ರೀ ಚನ್ನಬಸವದೇವರವರ ಸಂಬಂಧವಿಲ್ಲ. ಸಮಯ ಸಿಕ್ಕಾಗಲೆಲ್ಲ ಕಲ್ಲಪ್ಪನಿಗೆ ಈ ವ್ಯವಹಾರವನ್ನು ಬಿಡು ಎಂದು ಹೇಳುತ್ತಲೇ ಇದ್ದರು. ಕಲ್ಲಪ್ಪ ಕೇಳಲಿಲ್ಲ; ಅದು ಇಲ್ಲಿಯವರೆಗೆ ಬಂದಿತು. ಕುಹಕಿಗಳು ಕಲ್ಲಪ್ಪನ ವೈರವನ್ನು ಶ್ರೀ ಚನ್ನಬಸವದೇವರವರ ಮೇಲೆ ಸಾಧಿಸಬಯಸಿದರು. ಶ್ರೀ ಚನ್ನಬಸವದೇವರವರ ಕೊಲೆ ಮಾಡುವ ಸಂಚು ಪ್ರಾರಂಭವಾಯಿತು.

ಈ ವಿಷಯವನ್ನು ದಿವಾನ ದುಂಡಪ್ಪ ಎಂಬ ಸಹೃದಯಿಗಳೊಬ್ಬರು 'ಇಂತಹವನೊಬ್ಬ ನಿನ್ನ ಕೊಲೆಮಾಡಲಿರುವನು; ನೀನು ಸ್ವಲ್ಪ ಜಾಗ್ರತೆಯಿಂದ ಇರು.' ಎಂದು ಹೇಳಿದರು. ಅದಕ್ಕೆ ಶ್ರೀ ಚನ್ನಬಸವದೇವರವರು 'ಈ ಶರೀರ ಎಂದೋ ಸತ್ತು ಹೋಗಿದೆ, ಸತ್ತು ಹೋದ ಶರೀರ ಮತ್ತೆ ಸಾಯುತ್ತದೆ ಏನು?' ಎಂದು ಕೇಳಿದರು. ಈ ಮಾತು ಹಾಸ್ಯವಾಗಿ ಕಂಡಿತು ಆ ಸಹೃದಯಿಗೆ. ನನ್ನ ಮಾತನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಇವರು ಎಂದು ಅಂದುಕೊಂಡ. ಶ್ರೀ ಚನ್ನಬಸವದೇವರವರ ನಿಲುವು ಆತನಿಗೆ ಕಾಣಿಸಲಿಲ್ಲ. ಆತಾ ಶರೀರೀ ತರೀ ಆಹೇ। ಪರಿ ಶರೀರಾಚಾ ತೋ ನೋಹೇ। ಜ್ಞಾನೇಶ್ವರೀ-೬-೪೦೩ ಶರೀರದಲ್ಲೇನೋ ಇರುವರು, ಎಲ್ಲರಂತೆ. ಆದರೆ ಶರೀರ ಸಂಬಂಧವನ್ನು ಅದಾವಾಗಲೋ ಕಳಚಿಕೊಂಡಿರುವರು. ನಶ್ವರವಾದ ಶರೀರದಲ್ಲಿ ಇದ್ದುಕೊಂಡೇ ಅಮರತ್ವವನ್ನು ಅನುಭವಿಸುತ್ತಿದ್ದಾರೆ. ತನ್ನ ಮುಕ್ತಸ್ಥಿತಿ ಯನ್ನು ಅನುಭವಿಸುತ್ತಿರುವದರಿಂದ ಶ್ರೀ ಚನ್ನಬಸವದೇವರವರ ಇರುವಿಕೆಯಲ್ಲಿ ಪೂರ್ಣ ಬದಲಾವಣೆ ಕಂಡುಬರುತ್ತಲಿದೆ. ಬದಲಾವಣೆ ಎಂದರೇನು? ಬಹಿರ್ಮುಖವಾಗಿ ಚಂಚಲಗೊಂಡ ಮನ ಬುದ್ಧಿ ಮುಂತಾದ ಇಂದ್ರಿಯಗಳು ಸಂಸ್ಕಾರಗೊಳ್ಳುವಿಕೆ. ಶ್ರೀ ಚನ್ನಬಸವ ದೇವರವರು ತಮ್ಮ ಎಲ್ಲ ಕರಣ-ಇಂದ್ರಿಯಗಳಿಂದ ಕೇವಲ ಭಗವತ್ ತತ್ತ್ವವನ್ನೇ ಸ್ಪರ್ಶ ಮಾಡುತ್ತಲಿದ್ದಾರೆ. ಅವನು, ಇವನು, ಅದು, ಇದು, ಶ್ರೇಷ್ಠ, ಕನಿಷ್ಠ ಎಂಬ ಯಾವ ಭೇಧವೂ ಇಲ್ಲ,

ಏಥ ಭೇದು ತರೀ ಕೀ ದೇಖಾವಾ । ಜರೀ ಅಹಂಭಾವ ಉರಲಾ ಹೋಆವಾ । ತೋ
ಆಧೀಚಿ ನಾಹೀ ಆಘವಾ। ಆತಾ ವಿಷಮ ಕಾಈ ॥ ಜ್ಞಾನೇಶ್ವರೀ-೫-೯೫

ಅಹಂಭಾವ ಇದ್ದಿದ್ದರೆ ಅದು, ಇದು, ಎಂಬ ಭೇದ ಪ್ರಪಂಚದ ಪ್ರತೀತಿಯಾಗುತ್ತಿತ್ತು. ಆದರೆ ನೋಡಲು 'ತಾನು' ಉಳಿದೇ ಇಲ್ಲ. ತಾನೇ ಇಲ್ಲವಾದ ಮೇಲೆ, ತೋರಲು ಸಮ-ವಿಷಮವಾದ ಪ್ರಪಂಚಕ್ಕೆ ಅಸ್ತಿತ್ವವಾದರೂ ಎಲ್ಲಿದೆ?

'ನಾನು' ಎಂಬ ಮಿಥ್ಯಾ ಅಭಿಮಾನದಿಂದಲೇ ಜೀವಿ, ಜನನ-ಮರಣರೂಪ ಸಂಸಾರ ಸಾಗರದಲ್ಲಿ ಮುಳುಮುಳುಗಿ ಏಳುತ್ತಲಿದೆ. ಅಭಿಮಾನವು ನಷ್ಟವಾಗದೇ ಪೂರ್ಣತ್ವದ ಅನುಭವ ಹೃದಯದಲ್ಲಿ ಪ್ರಕಟವಾಗಲಾರದು. ಈ ಅಭಿಮಾನ ತುಂಬ ಸೂಕ್ಷ್ಮ. ದೇವಾನುದೇವತೆಗಳು ಕೂಡ ಈ ಅಭಿಮಾನದಿಂದ ಪಾರಾಗಲಿಲ್ಲ. ಚತುರ್ಮುಖ ಬ್ರಹ್ಮನೂ ಈ ಅಭಿಮಾನವನ್ನು ಗುರ್ತಿಸಲಿಲ್ಲ. ಗುರ್ತಿಸಲಿಲ್ಲವಾದ್ದರಿಂದ ಅದರ ಹಿಡಿತದಿಂದ ಪಾರಾಗಲಿಲ್ಲ. ಸಹಸ್ರ-ಸಹಸ್ರ ವರುಷಗಳವರೆಗೆ ಯಜ್ಞ-ಯಾಗ, ಜಪ-ತಪಾದಿಗಳನ್ನು ಮಾಡಿದರೂ, ಅಭಿಮಾನ ನಾಶವಾಗದು. ಬದಲಾಗಿ 'ಇಂತಹ ತಪಸ್ಸು ಮಾಡಿದೆ', 'ಸಕಲ ಶಾಸ್ತ್ರವನ್ನು ಅಧ್ಯಯನ ಮಾಡಿದೆ', ಎಂಬ ಅಭಿಮಾನ ಬಲಗೊಳ್ಳುವುದು. ಇಂತಹ ಅಭಿಮಾನವನ್ನು ಶ್ರೀ ಚನ್ನಬಸವದೇವರವರು ಹೇಗೆ ಕಳೆದುಕೊಂಡರು?

ಇದು ಸತ್ಸಂಗತಿಯ ಮಹಿಮೆ. ಯಾವ ಅಭಿಮಾನವನ್ನು ದೇವಾನುದೇವತೆಗಳಿಗೆ ಕಳೆದುಕೊಳ್ಳಲು ಬರುತ್ತಿಲ್ಲವೋ, ಆ ಅಭಿಮಾನವನ್ನು ಸತ್ಸಂಗತಿ, ಸತ್‌ಶಾಸ್ತ್ರ, ಸದ್ಗುರುವಿನ ಆಶ್ರಯದಲ್ಲಿ ಕಳೆದುಕೊಳ್ಳಲು ಬರುತ್ತದೆ. ಸದ್ಗುರುವಿನ ಕೃಪಾಶ್ರಯದಲ್ಲಿ ಮಾತ್ರ ಇದು ನಷ್ಟವಾಗುತ್ತದೆ. ಶ್ರೀ ಚನ್ನಬಸವದೇವರವರು ಯಾವಾಗ 'ನೀನೇ ಗತಿ, ಮತಿ, ಸ್ಥಿತಿ–ಎನೆಲ್ಲವೂ ನೀನೇ' ಎಂಬ ಭಾವದಿಂದ ಶ್ರೀಗಳವರ ಪಾದಗಳಿಗೆ ನಮಿಸಿದರೋ–'ನಮಿತಾ ಮಾನಾಭಿಮಾನಾಗಳಾಲೆ'–ಜ್ಞಾನೇಶ್ವರೀ ೬–೨೨೭ ಆ ಕ್ಷಣದಿಂದಲೇ ತಮ್ಮ ಅಭಿಮಾನವನ್ನು ಬದಿಗೆ ಸರಿಸುತ್ತ ನಡೆ ದರು. ಸದ್ಗುರುವಿನ ಆಶ್ರಯವೇ ನಿಜಶಿಷ್ಯನಲ್ಲಿರುವ ಅಭಿಮಾನವನ್ನು ಕ್ಷಣಕ್ಷಣ ದಲ್ಲಿ ಕರಗಿಸುತ್ತಲಿರುತ್ತದೆ. ಶ್ರೀಗಳವರು ತಮ್ಮ ಶಿಷ್ಯರನ್ನು ಸಂರಕ್ಷಿಸುವ ರೀತಿಯೇ ಅಮೋಘ. ನಿಜಭಾವ, ನಿಜನಿಷ್ಠೆಯಿಂದ ಸಾಧಕನು ಸದ್ಗುರುವಿನ ಸಹವಾಸ ಮಾಡಿದರೆ– ಹೃದಯಾ ಹೃದಯಾ ಏಕ ಜಾಲೇ। ಯೇ ಹೃದಯೀಚೇ ತೇ ಹೃದಯೀ ಘಾತಲೇ। ಜ್ಞಾನೇಶ್ವರೀ ೧೮–೧೪೨೧. ಆ ಸದ್ಗುರು ವಿನ ಹೃದಯದಲ್ಲಿರುವ ಪೂರ್ಣಸಮಾಧಾನವು ಸತ್‌ಶಿಷ್ಯನ ಹೃದಯ ವನ್ನು ಪ್ರವೇಶಿಸಿ ವ್ಯಾಪಿಸುತ್ತದೆ. ಶ್ರೀಗಳವರ ಕೃಪಾದೃಷ್ಟಿ ಅತೀ ಸೂಕ್ಷ್ಮ– 'ಲಳೇಯಾಚಿಯಾ ಬಾಳಕಾ ಕಿರೀಟೀ। ಗವಸಣಿ ಕರೂನಿ ಸ್ನೇಹಾಚಿಯಾ ದಿಠೀ। ಜೈಸಿ ಖೇಳತಾ ಪಾಠೋಪಾಠೀ। ಮಾಉಲಿ ಧಾವೇ॥' ಜ್ಞಾನೇಶ್ವರೀ ೧೦–೨೩೪.

ನಡೆಯಲು ಬಾರದಿರುವ ಚಿಕ್ಕ ಮಗುವೊಂದು ಮಾತೆಯ ಮಮತೆಯ ಮಡಿಲಿನಿಂದ ಎದ್ದಿದೆ; ತಪ್ಪು ಹೆಜ್ಜೆಗಳನ್ನು ಇಡುತ್ತ, ತೂಗಾಡುತ್ತ ನಡೆಯುತ್ತಲಿದೆ. ಆಡಲೋಡುತ್ತಿರುವ ಮಗುವಿನ ಸುತ್ತ ಮಮತೆಯ ನೋಟ ವನ್ನೇ ಪಂಜರವನ್ನಾಗಿಸಿಕೊಂಡು, ಹಿಂದೆ ಹಿಂದೆಯೇ ಓಡುತ್ತಿದ್ದಾಳೆ ತಾಯಿ. ಮಗು ಬಿದ್ದರೆ ಅವಳ ಮಡಿಲಿನಲ್ಲಿಯೇ ಬೀಳಬೇಕು. ಶ್ರೀಗಳವರ ಕೃಪಾದೃಷ್ಟಿ ಇದಕ್ಕಿಂತಲೂ ಸೂಕ್ಷ್ಮ. ತನ್ನ ಆಶ್ರಯಕ್ಕೆ ಬಂದ ಮುಮುಕ್ಷುಗಳು ಯಾವ ರೀತಿಯಿಂದ ಕುಳಿತುಕೊಳ್ಳುವರು–ಯಾವ ಭಾವದಿಂದ ಏಳುವರು ಎಂಬುವದನ್ನು ಶ್ರೀಗಳವರು ಸೂಕ್ಷ್ಮದೃಷ್ಟಿಯಿಂದ ನೋಡುತ್ತಲೇ ಇರುತ್ತಾರೆ. ನಡೆಯುವಾಗ ಒಂದೇ ಒಂದು ಅಹಂಕಾರದ ಹೆಜ್ಜೆ ಬಿದ್ದರೆ, ತಮ್ಮ ಎದೆಯ ಮೇಲೆಯೇ ಹೆಜ್ಜೆ ಇಟ್ಟರೇನೋ ಎಂಬಂತೆ ಬಾಧೆ ಪಡುವರು. ಶಿಷ್ಯನಲ್ಲಿರುವ ಅಹಂಕಾರ–ಅಭಿಮಾನವನ್ನು ಶ್ರೀಗಳವರು ಎಂದಿಗೂ ಸಹಿಸಲಾರರು. ಶ್ರೀಗಳವರ ಆಶ್ರಯದಲ್ಲಿ ಶ್ರೀ ಚನ್ನಬಸವದೇವರವರ ಅಭಿಮಾನ –ಅಹಂಕಾರಗಳು ಸುಮ್ಮನೆ ಕರಗಿಹೋಗಿವೆ. ಇದೊಂದು ಪುನರ್ಜನ್ಮ.

ಗುರುತತ್ತ್ವದಲ್ಲಿ ಹುಟ್ಟಿ -ಶಿವತತ್ತ್ವದಲ್ಲಿ ಬೆಳೆದು

ಪರತತ್ತ್ವದಲ್ಲಿ ಮಗ್ನನಾದ ಶರಣಂಗೆ

ಕಾಯವಳಿದು ನಿರ್ವಯಲಾದಡೇನು?

ಕಾಯ ಸಮಾಧಿ, ಕರಣ ಸಮಾಧಿ, ಭಾವ ಸಮಾಧಿಯಾದ ಬಳಿಕ

ಗುಹೇಶ್ವರ ಲಿಂಗದಲ್ಲಿ ಬಯಲ ಭ್ರಮೆಯ ಕಳೆದು

ಸುಜ್ಞಾನ ಸಮಾಧಿಯನೆಯ್ದುಬಲ್ಲರೆ

ಅದು ನಿಜ ಸಮಾಧಿ ಕೇಳಾ ಸಿದ್ಧರಾಮಯ್ಯ.

ಗುರುವಿನ ಆಶ್ರಯದಲ್ಲಿ ಅಭಿಮಾನ-ಅಹಂಕಾರಗಳನ್ನುಕರಗಿಸಿಕೊಳ್ಳುವದೇ, ಗುರುತತ್ತ್ವದಲ್ಲಿ ಹುಟ್ಟುವಿಕೆ. ಗುರುತತ್ತ್ವದಲ್ಲಿಹುಟ್ಟಿ-ಶಿವತತ್ತ್ವದಲ್ಲಿ ಬೆಳೆದು. ಶಿವವೆಂದರೆ ಮಂಗಳಕರವಾದುದು. ಆತ್ಮವನ್ನು ಹೊರುತುಪಡಿಸಿ ಉಳಿದುದೆಲ್ಲ ಅಮಂಗಳ. ಆತ್ಮತತ್ತ್ವದ ಅವ್ಯಯ, ನಿಷ್ಕ್ರಿಯ, ಅವಿಕಾರ್ಯ, ಏಕಮೇವಾದ್ವಿತೀಯತ್ವವನ್ನು ಅನುಕ್ಷಣದ ಅನುಭವದ ದೃಢತೆಯಿಂದ ನಿಶ್ಚಯ ಮಾಡಿಕೊಳ್ಳುವಿಕೆಯೇ ಶಿವತತ್ತ್ವದಲ್ಲಿ ಬೆಳೆಯುವಿಕೆ. ಪ್ರತಿಯೊಂದು ವ್ಯವಹಾರದಲ್ಲಿ ನಿಜಭಾವ. ತನಗೆ ತಾನು ಕೊಟ್ಟಂತೆ, ತನ್ನೊಂದಿಗೆ ತಾನು ಮಾತನಾಡಿದಂತೆ; ಕೊಡುವಿಕೆ-ತೆಗೆದುಕೊಳ್ಳುವಿಕೆ-ನೋಡುವಿಕೆ ಈ ಯಾವ ವ್ಯವಹಾರದಲ್ಲಿಯೂ ಅಹಮ್ ಇಲ್ಲ, ಇದಮ್ ಇಲ್ಲ. ಯತ್ರ ನ ಅನ್ಯತ್ ಪಶ್ಯತಿ, ನ ಅನ್ಯತ್ ಶೃಣೋತಿ, ನ ಅನ್ಯತ್ ವಿಜಾನಾತಿ-ಸ ಭೂಮಾ. ಏನನ್ನೂ-ಯಾವುದನ್ನೂ- ಯಾರನ್ನೂ , ಇನ್ನೊಂದನ್ನಾಗಿ ನೋಡುವುದಿಲ್ಲ; ಇನ್ನೊಂದನ್ನಾಗಿ ಕೇಳುವುದಿಲ್ಲ; ಇನ್ನೊಂದನ್ನಾಗಿ ತಿಳಿಯುವದಿಲ್ಲ; ಏನೆಲ್ಲವೂ ತಾನೇ.

ಆತ್ಮಾ ಏವ ಅಧಸ್ತಾತ್, ಆತ್ಮಾ ಉಪರಿಷ್ಟಾತ್, ಆತ್ಮಾ ಪಶ್ಚಾತ್, ಆತ್ಮಾ ಪುರಸ್ತಾತ್, ಆತ್ಮಾ ದಕ್ಷಿಣತಃ, ಆತ್ಮಾ ಉತ್ತರತಃ ಆತ್ಮಾ ಏವ ಇದಂ ಸರ್ವಂ ಇತಿ ಸ ವಾ ಏಷಃ ಏವಂ ಪಶ್ಯನ್, ಏವಂ ಮನ್ವಾನಃ, ಏವಂ ವಿಜಾನನ್ ಆತ್ಮರತಿಃ ಆತ್ಮಕ್ರೀಡಃ ಆತ್ಮಮಿಥುನಃ ಸ ಸ್ವರಾಡ್ಭವತಿ. ಮೇಲಿರುವದೂ ಆತ್ಮ, ಕೆಳಗಿರುವದೂ ಆತ್ಮ, ಹಿಂದೆ ಇರುವದೂ ಆತ್ಮ, ಮುಂದೆ ಇರುವದೂ ಆತ್ಮ, ಉತ್ತರ ದಕ್ಷಿಣಕ್ಕಿರುವದೂ ಆತ್ಮ, ಪೂರ್ವ ಪಶ್ಚಿಮಕ್ಕಿರುವದೂ ಆತ್ಮ; ಸರ್ವವಸ್ತು-ಸರ್ವದೇಶ-ಸರ್ವಕಾಲ, ಇದ್ದದ್ದು, ಇಲ್ಲದ್ದು, ಎಲ್ಲವೂ ಆತ್ಮ. ಆತ್ಮ ಎಂದರೆ ತಾನು.

ಶ್ರೀ ಚನ್ನಬಸವದೇವರವರು ತಮ್ಮ ಮಹತ್ ಇರುವಿಕೆಯನ್ನು, ತಮ್ಮ ಪರಿಪೂರ್ಣತೆಯನ್ನು ಅನುಭವಿಸುತ್ತಿದ್ದಾರೆ. ದೇಹದಲ್ಲಿ ಇದ್ದಂತೆ ಏನೋ ಕಾಣುತ್ತಿದ್ದಾರೆ; ದೇಹಾತೀತ ಅವಸ್ಥೆಯಲ್ಲಿ ಜೀವಿಸುತ್ತಿದ್ದಾರೆ. ಎಲ್ಲರ ಜೀವಿಸುವಿಕೆಯೇ ಬೇರೆ, ಆದರೆ ಶ್ರೀ ಚನ್ನಬಸವದೇವರವರು ಜೀವಭಾವವನ್ನು ಕಳೆದುಕೊಂಡು ಶಾಶ್ವತ ಸುಖದ ಸಾಗರದಲ್ಲಿ ಜೀವಿಸಿರುವರು. ಸಕಲ ಬ್ರಹ್ಮಾಂಡದ ಐಶ್ವರ್ಯ, ಪದವಿಗಳೆಲ್ಲ ತುಚ್ಛ. ಶಾಶ್ವತ ಸುಖದ ಮುಂದೆ ಎಲ್ಲವೂ ನಶ್ವರ. ನಶ್ವರದಲ್ಲಿ ಶ್ರೀ ಚನ್ನಬಸವದೇವರವರು ಹೇಗೆ ರಮಿಸಿಯಾರು?. ನಶ್ವರದಲ್ಲಿ ಆಕಾರವಾಗಿ ರಮಿಸುವ ಯಾವ ಗುಣಗಳು ಅಂತಃಕರಣದಲ್ಲಿ ಇದ್ದಿದ್ದವೋ ಅವು ಗುರುಕರುಣೆಯ ಕಣ್ಣಾವಲಿನಲ್ಲಿ ಮಾಡಿದ ತಪವೆಂಬ ಅಗ್ನಿಯಲ್ಲಿ ಅದಾವಾಗಲೋ ಸುಟ್ಟು ಭಸ್ಮವಾಗಿವೆ.

ಶ್ರೀ ಚನ್ನಬಸವದೇವರವರು ಶಾಶ್ವತದ ಸಂಬಂಧದಿಂದ ಸತ್ಯ ಇರುವಿಕೆಯಲ್ಲಿ ಜೀವಿಸುತ್ತಿದ್ದಾರೆ. ಅವರ ಕ್ಷಣಕ್ಷಣದ ಇರುವಿಕೆಯಲ್ಲಿ ಸತ್ಯದ ಭೋಗವಾಗುತ್ತಲಿದೆ. ಶಾಶ್ವತದ ಸಂಭ್ರಮ ಹೆಚ್ಚಾಗುತ್ತಲಿದೆ. ಪರಾತ್ಪರ ತತ್ತ್ವದಲ್ಲಿ ಕೂಡಿ, ಕೂಡುತ್ತಲೇ ಇದ್ದಾರೆ. 'ಗಂಗಾ ಜೈಸೀ ಅನನ್ಯ ಗತೀ । ಮಿಳಾಲೀಚಿ ಮಿಳೆ।' ಗಂಗೆ ಹೇಗೆ ಅನನ್ಯಗತಿಕಳಾಗಿ ಸಾಗರದಲ್ಲಿ ಕೂಡಿ ಕೂಡುತ್ತಲೇ ಇರುವಳೋ ಹಾಗೆ ಪರಾತ್ಪರ ತತ್ತ್ವದಲ್ಲಿ ಕೂಡಿ ಕೂಡುತ್ತಲೇ ಇರುವ ಆ ಮಹಾ ಮಹಿಮನ ಜೀವನವು ಸಕಲ ಮುಮುಕ್ಷುವೃಂದಕ್ಕೆ ಪೋಷಕವಾಗಿರುತ್ತದೆ. ಗುರುತತ್ತ್ವದಲ್ಲಿ ಹುಟ್ಟಿ ಶಿವತತ್ತ್ವದಲ್ಲಿ ಬೆಳೆದು. ಪರತತ್ತ್ವದಲ್ಲಿ ಮಗ್ನನಾದ ಶರಣನಿವನು. ಪರಾತ್ಪರ ತತ್ತ್ವದಲ್ಲಿ ತತ್ತ್ವರೂಪ ದಿಂದ ಕೂಡಿದ ಶರಣನು ಕಾಯವಳಿದು ಮುಕ್ತನಾದರೇನು?, ಆಗದಿರೆ ಏನು? ಕಾಯ-ಕರಣ-ಭಾವವೆಲ್ಲ ನಿಜ ಅರಿವಿನಲ್ಲಿ ಕರಗಿ ಹೋಗಿವೆ. ಮಹಾಬೆಳಗಿನ ಪ್ರತಾಪದಿಂದ ಮಾನವ ಘಟದ ಪ್ರಕೃತಿಯ ಗುಣಧರ್ಮಗಳೆಲ್ಲ ಸುಟ್ಟು ನಿರ್ಮಲವಾಗಿ ನಿಂತಿದೆ. ಬಂಧನದಲ್ಲಿದ್ದೆ; ಮುಕ್ತನಾದೆ, ಎಂಬ ಬಯಲ ಭ್ರಮೆಯ ಕಳೆದು ಸುಜ್ಞಾನ ಸಮಾಧಿಯಲ್ಲಿದ್ದಾರೆ, ಶ್ರೀ ಚನ್ನಬಸವದೇವರವರು. "ಅದು ನಿಜ ಸಮಾಧಿ ಕೇಳಾ ಸಿದ್ಧರಾಮಯ್ಯ" ಎಂಬ ಪ್ರಭುದೇವರ ವಚನವನ್ನು ಶ್ರೀ ಚನ್ನಬಸವದೇವರವರು ಮಾರ್ನುಡಿಯುತ್ತಿದ್ದಾರೆ, ತಾವು ನಿಂತ ನಿಲುವಿನಿಂದ.

'ತನುತ್ಯಾಗೇ ವಿನ। ಅಮೂರ್ತಾಚೇ ಗುಣ।ದಿಸತೀ ಸಂಪೂರ್ಣ।'ಜ್ಞಾನೇಶ್ವರೀ ೫-೩೯ ತನುತ್ಯಾಗದ ವಿನಾ -ಅಮೂರ್ತದ ಗುಣ-ತೋರುತ್ತಿದೆ ಸಂಪೂರ್ಣ. ನಾನು ದೇಹೀ- ನನಗೊಂದು ಶರೀರವಿದೆ ಎಂಬ ಭಾವನೆಯೇ ಇಲ್ಲ. ನಶ್ವರದಲ್ಲಿ ಈಶ್ವರನ ಪ್ರಕಟ ಇರುವಿಕೆ. 'ಏರ್ಹವೀ ಆಣಿಕಾಂಚಿಯೇ ಪರೀ। ತೋಹೀ ಏಕ ಶರೀರೀ ।ಆಶೇಷೀಹೀ ವ್ಯಾಪಾರೀ । ವರ್ತತು ದಿಸೇ॥' ಜ್ಞಾನೇಶ್ವರೀ ೫-೪೦ ಪೂರ್ಣಪರಬ್ರಹ್ಮನ ಲಕ್ಷಣಗಳು ಆ ಪುರುಷನಲ್ಲಿ

ಪ್ರಕಟವಾದರೂ, ಆತನು ಇತರರಂತೆ ಶರೀರಧಾರಿಯಾಗಿದ್ದುಕೊಂಡೇ, ಸರ್ವವ್ಯವಹಾರವನ್ನು ಮಾಡಿತ್ತಿರುವವನಂತೆ ಕಂಡುಬರುತ್ತಾನೆ.

'ನಾನಾ ಚಕ್ರೀ ಭಾಂಡೆ ಜಾಲೇ । ತೇ ಕುಲಾಲೇ ಪರತೇ ನೇಲೇ । ಪರಿ ಭ್ರಮೋಚಿ ತೇ ಮಾಗಿಲೇ । ಭೋವಂಡಿಲೇಪಣೇ ।।ತೈಸಾ ದೇಹಾಭಿಮಾನು ಗೇಲಿಯಾ । ದೇಹ ಜೇನೇ ಸ್ವಭಾವೇ ಧನಂಜಯಾ। ಜಾಲೇ ತೇ ಅಪ್ಯೆಸಯಾ । ಚೇಷ್ಟವೀಚ ತೇ।।' ಜ್ಞಾನೇಶ್ವರೀ ೧೮-೪೨೭,೪೨೮ ತಿರುಗುವ ಚಕ್ರದ ಮೇಲೆ ತಯಾರಾದ ಮಣ್ಣಿನ ಮಡಕೆಯನ್ನು ಕುಂಬಾರನು ಚಕ್ರದಿಂದ ತೆಗೆದು ಕೆಳಗಿಟ್ಟರೂ, ಆ ಚಕ್ರ ತನ್ನ ಗತಿ ನಿಲ್ಲುವವರೆಗೆ ತಿರುಗುತ್ತಲೇ ಇರುವಂತೆ, ಯಾವ ಕಾರ್ಯಕ್ಕಾಗಿ ಈ ಕಾಯ ಬಂದಿತ್ತೋ ಆ ಕಾರ್ಯವನ್ನು ಸಾಧಿಸಿದ ಮೇಲೂ, ಕಾಯ ತನ್ನಷ್ಟಕ್ಕೆ ತಾನೆ ಪ್ರಾರಬ್ಧಗತಿಯಿಂದ ವ್ಯವಹಾರದಲ್ಲಿ ತೊಡಗಿಯೇ ಇದೆ. ಸಂಕಲ್ಪವಿಲ್ಲದೇ ಬೀಳುವ ಸ್ವಪ್ನದಂತೆ, ಬಿತ್ತದೇ ಬೆಳೆಯುವ ವನಸಿರಿಯಂತೆ, ರಚಿಸದೆ ತೋರುವ ಗಂಧರ್ವಭುವನದಂತೆ ಆತ್ಮನ ಉದ್ಯಮವಿಲ್ಲದೇನೇ, ದೇಹದಲ್ಲಿ ಸಕಲ ಚೇಷ್ಟಾಜಾತ ವ್ಯವಹಾರಗಳು ತಮ್ಮಷ್ಟಕ್ಕೆ ತಾವೇ ಜರುಗಿಕೊಂಡು ಹೋಗುತ್ತಲಿರುತ್ತವೆ. 'ತೋಹೀ ನೇತ್ರೀ ಪಾಹೇ । ಶ್ರವಣೇ ಐಕತು ಆಹೇ । ಪರಿ ತೇಥೀಂಚಾ ಸರ್ವಥಾ ನೋಹೇ । ನವಲ ದೇಖೇ।। ಜ್ಞಾನೇಶ್ವರೀ ೫-೪೧ ಅವನೂ ಇತರರಂತೆ ಕಣ್ಣಿನಿಂದ ನೋಡುತ್ತಾನೆ, ಕಿವಿಯಿಂದ ಕೇಳುತ್ತಾನೆ. ಸರ್ವೇಂದ್ರಿಯಗಳಿಂದ ಸರ್ವವ್ಯವಹಾರವನ್ನು ಮಾಡುತ್ತಾನೆ.ಆದರೆ ಸರ್ವವ್ಯವಹಾರದಿಂದ ಅಲಿಪ್ತನಾಗಿ ತನ್ನ ನಿಜ ಇರುವಿಕೆಯಲ್ಲಿ ನೆಲೆನಿಂತಿರುತ್ತಾನೆ. 'ದೀಪಾಚೇನಿ ಪ್ರಕಾಶೇ । ಗ್ರಿಹೀಂಚೇ ವ್ಯಾಪಾರ ಜೈಸೇ । ದೇಹೀ ಕರ್ಮಜಾತ ತೈಸೇ। ಯೋಗಯುಕ್ತಾ।।' ಜ್ಞಾನೇಶ್ವರೀ ೫೪೬. ಬೆಳಗುತ್ತಿರುವ ದೀಪದ ಪ್ರಕಾಶದಿಂದ ಮನೆಯೊಳಗಿನ ಸಮಸ್ತ ವ್ಯವಹಾರಗಳು ಜರುಗಿಕೊಂಡು ಹೋಗುತ್ತಿರುತ್ತವೆ, ಆದರೆ ಈ ಎಲ್ಲ ಕ್ರಿಯಾಕಲಾಪಗಳಿಂದ ಆ ದೀಪ ಯಾವ ರೀತಿಯಲ್ಲಿ ಕೇವಲ ಆಲಿಪ್ತವಾಗಿರುವದೋ ಆ ರೀತಿ ಈ ಪುರುಷನ ಸನ್ನಿಧಿ ಮಾತ್ರದಿಂದ ಸಕಲ ದೈಹಿಕ, ಮಾನಸಿಕ ಕ್ರಿಯೆಗಳು ನಡೆಯುತ್ತಿರುತ್ತವೆ. ನೀರಿನೊಳಗಿದ್ದೂ ಕಮಲ ಪತ್ರವು ನೀರಿನಿಂದ ಆಲಿಪ್ತ ಇರುವಂತೆ, ಸಕಲ ಕ್ರಿಯಾಕಲಾಪಗಳಲ್ಲಿ ಇದ್ದಂತೆ ಇದ್ದರೂ, ಅವುಗಳಿಂದ ಆತ ನಿರ್ಲಿಪ್ತನಾಗಿದ್ದುಕೊಂಡು, ಯಾವದೇ ಕರ್ಮ ಬಂಧನದಲ್ಲಿ ಸಿಲುಕಲಾರ.

'ಆತಾ ಜಾಯಾಂಚೇ ಜೈಸೇ ಲೇಣೇ । ಅಂಗಾವರೀ ಆಹಾಚವಾಣೇ ।ತೈಸೇ ದೇಹ ಧರಣೇ ।ಉದಾಸ ತಯಾಚೇ ।। ಪರಿಮಳು ನಿಘಾಲಿಯಾ ಪವನಾಪಾಠೀ । ಮಾಗೇ ವೋಸ ಫೂಲ ರಾಹೇ ದೇಠೀ । ತೈಸೇ ಆಯುಷ್ಯಾಚಿಯೇ ಮುಠೀ । ಕೇವಳ ತನು।।' ಜ್ಞಾನೇಶ್ವರೀ ೯-೪೧೨, ೪೧೩ ಒಬ್ಬನು ಹೇಗೆ ಇನ್ನೊಬ್ಬರಿಂದ ಕಡ ಪಡೆದು ಧರಿಸಿದ ಆಭರಣಗಳು ದೇಹದ ಮೇಲೆ ಇರುವಾಗಲೇ ಆ ಆಭರಣಗಳ ಕುರಿತು, ಆಸಕ್ತಿ- ಮಮಕಾರ ಬುದ್ಧಿ

ಇಟ್ಟುಕೊಂಡಿರುವದಿಲ್ಲವೋ, ಹಾಗೆ ಪರಬ್ರಹ್ಮಸ್ವರೂಪದಲ್ಲಿ ನೆಲೆನಿಂತ ಮೇಲೆ, ಪಂಚಮಹಾಭೂತಗಳಿಂದ ಕೂಡಿದ ಶರೀರದಲ್ಲಿ, ಆಸಕ್ತಿ–ಮಮಕಾರ ಬುದ್ಧಿ ಇಲ್ಲದೇ ಸುಮ್ಮನೆ ಉದಾಸವಾಗಿ ಇರುತ್ತಾನೆ. ಗಾಳಿಯ ಬೆಂಬತ್ತಿ ಹೋಗಿದೆ ಸುಗಂಧ. ಗಂಧರಹಿತ ಪುಷ್ಪಮಾತ್ರ ಅಂಟಿಕೊಂಡೇ ಇದೆ ದೇಟಿನಲ್ಲಿ. ಅದರಂತೆಯೇ ಪರಬ್ರಹ್ಮ ಸ್ವರೂಪದಲ್ಲಿ ನೆಲೆನಿಂತಮೇಲೆ ಪ್ರಾರಬ್ಧದ ಮುಷ್ಠಿಯಲ್ಲಿ ಕೇವಲ ಶರೀರವುಳಿದುಕೊಂಡಿದೆ. ಇವನಿಗೆ ' ನಿನ್ನ ಕೊಲೆಮಾಡುವವರಿದ್ದಾರೆ ಜಾಗ್ರತೆಯಿಂದ ಇರು ' ಎಂದು ಹೇಳಿದಾಗ. ಮರಣಾಹೀ ಆಧೀ ರಾಹಿಲೋ ಮರೋನಿ ಎಂಬಂತೆ ' ಈ ಶರೀರ ಎಂದೋ ಸತ್ತು ಹೋಗಿದೆ. ಸತ್ತು ಹೋದ ಶರೀರ ಮತ್ತೆ ಸಾಯುತ್ತದೆ ಏನು ' ಎಂದು ಮುಕ್ತಪುರುಷನು ಮಾರುತ್ತರ ಕೊಟ್ಟರೆ ಇದರಲ್ಲಿ ಅಸಹಜತನವೇನಿದೆ.

ಶ್ರೀ ಚನ್ನಬಸವದೇವರವರ ಸಮಸ್ತ ಚಟುವಟಿಕೆಗಳಲ್ಲಿ ನಿಸ್ಸಂಗ, ನಿಸ್ಸೀಮ, ನಿರ್ವಿಕಾರ ಅಮರತ್ವದ ಇರುವಿಕೆ, ಸುಮ್ಮನೆ ಪ್ರಕಟವಾಗುತ್ತಲೇ ಇತ್ತು. ದಿನನಿತ್ಯದ ಒಡನಾಟದಿಂದ ನೀಲಜಕರರವರಿಗೆ ಶ್ರೀ ಚನ್ನಬಸವದೇವರವರ ನಿಲುವು ಸ್ಪಷ್ಟವಾಗಿ ಕಾಣುತ್ತಲಿತ್ತು. "ಮುಕ್ತ ಪುರುಷನು ಹಾಗಿರುತ್ತಾನೆ, ಹೀಗಿರುತ್ತಾನೆ" ಎಂದು, ಗ್ರಂಥಗಳಲ್ಲಿ ಹುಡುಕಾಡಿ ಚರ್ಚಿಸುತ್ತಿರುವ ಪಂಡಿತರಿಗೆ "ನೋಡಿರೋ ಇವನನ್ನು, ಮುಕ್ತಪುರುಷ ಹೀಗಿರುತ್ತಾನೆ" ಎಂದು ಹೇಳುವ ಇಚ್ಛೆಯಾಗುತ್ತಿತ್ತು ಶ್ರೀ ನೀಲಜಕರರವರಿಗೆ.

ಶರಣನು ನುಡಿದದ್ದೆಲ್ಲ ಸ್ತವನ. ನೋಡಿದ್ದೆಲ್ಲ ದರ್ಶನ.

ನಡೆದದ್ದೆಲ್ಲ ಪ್ರದಕ್ಷಿಣ. ಮಾಡಿದ್ದೆಲ್ಲ ಅರ್ಚನ. ನಿದ್ರೆಗೈದರೆ ಜಪ.

ಎದ್ದುಕುಳಿತರೆ ತಪ ಇದ್ದದ್ದೇ ಸಮಾಧಿ.

ನ ಜಾಯತೇ ಮ್ರಿಯತೇ ವಾ ಕದಾಚಿತ್

ನಾಯಂ ಭೂತ್ವಾ ಭವಿತಾ ವಾ ನ ಭೂಯಃ

ಅಜೋ ನಿತ್ಯಃ ಶಾಶ್ವತೋಯಂ ಪುರಾಣಃ

ನ ಹನ್ಯತೇ ಹನ್ಯಮಾನೇ ಶರೀರೇ

ನೈನಂ ಛಿಂದಂತಿ ಶಸ್ತ್ರಾಣಿ

ನೈನಂ ದಹತಿ ಪಾವಕಃ

ನ ಚೈನಂ ಕ್ಲೇದಯಂತ್ಯಾಪಃ

ನ ಶೋಷಯತಿ ಮಾರುತಃ

ಗೀತಾ –೨–೨೦, ೨೩.

ಈ ಆತ್ಮ ಎಂದಿಗೂ ಹುಟ್ಟುವದೂ ಇಲ್ಲ ಸಾಯುವದೂ ಇಲ್ಲ. ದೇಹವನ್ನು ಕೊಂದರೂ ಅದು ಸಾಯುವದಿಲ್ಲ. ಶಸ್ತ್ರಾಸ್ತ್ರಗಳು ತುಂಡರಿಸಲಾರವು. ಬೆಂಕಿ ಬೇಯಿಸಲಾರದು. ನೀರು ತೋಯಿಸ ಲಾರದು. ಗಾಳಿಯು ಒಣಗಿಸಲಾರದು.

ಏಷಾ ಬ್ರಾಹ್ಮೀ ಸ್ಥಿತಿಃ

ಆ ದಿನ ಬಂದಿತು. ಅಂದು ಬುಧವಾರ ೨೧-೬-೧೯೭೨. ಶ್ರೀ ಚನ್ನಬಸವದೇವರವರು ಬೆಳಗಾಂವಿಯಿಂದ ಹುಣಶೀಕಟ್ಟಿಗೆ ಬಂದಿದ್ದಾರೆ, ಶ್ರೀ ಚನ್ನಬಸವದೇವರವರು ಹಾಗು ಅವರ ತಂದೆ ಕೂಡಿಕೊಂಡು ಹೊಲದ ಕಡೆಗೆ ಹೊರಟಿದ್ದಾರೆ. ಶ್ರೀ ಚನ್ನಬಸವದೇವರು ಮುಂದೆ ನಡೆಯುತಿದ್ದರೆ, ಕಲ್ಲಪ್ಪನು ಅವರನ್ನು ತಲೆಕೆಳಗೆ ಹಾಕಿ ಹಿಂಬಾಲಿಸಿದ್ದಾನೆ. ಹಿಂಬಾಲಿಸಿ ನಡೆಯುತ್ತ ಹಾಗೆಯೇ ತಲೆಯೆತ್ತಿ ಒಂದು ಸಾರಿ ಶ್ರೀ ಚನ್ನಬಸವದೇವರನ್ನು ನೋಡಿದ. ಅವನಿಗೆ ಅವನ ಕಣ್ಣುಗಳನ್ನೇ ನಂಬಲಾಗುತ್ತಿಲ್ಲ. ಏಕೆಂದರೆ ಎದುರಿಗೆ ಕಾಣುವ ದೃಶ್ಯವೇ ಬೇರೆ.

ಶ್ರೀ ಚನ್ನಬಸವದೇವರು ಸ್ಥೂಲದೇಹಧಾರಿಗಳಾದ ಮನುಷ್ಯರಲ್ಲ. ಅವರ ದೇಹ ಅತೀ ಎತ್ತರವಾಗಿದೆ. ಆ ದೇಹದಿಂದ ಅಪೂರ್ವವಾದ ಜ್ಯೋತಿಯೊಂದು ಹೊರಸೂಸುತ್ತಿದೆ. ಅದರಿಂದ ಸುತ್ತಲಿನ ಪ್ರದೇಶವೆಲ್ಲಾ ಬೆಳಗಿ ಚೈತನ್ಯಮಯವಾಗಿದೆ. ಅವರು ನಡೆಯುವಾಗ ಅವರ ಜ್ಯೋತಿರ್ಮಯ ಪಾದಗಳು ನೆಲವನ್ನು ಸೋಂಕದೇ ಗಾಳಿಯಲ್ಲಿಯೇ ಮುನ್ನಡೆಯುತ್ತಿವೆ.

ಮೊದಲಿಗೆ ಇದೇನೋ ತನ್ನ ಕಣ್ಣಿನ ದೋಷವಿರಬೇಕು ಎಂದು ಭಾವಿಸಿದ ಕಲ್ಲಪ್ಪ. ಅಲ್ಲಿಯೇ ನಿಂತು ಕಣ್ಣುಗಳನ್ನು ಮತ್ತೆ ಮತ್ತೆ ಉಜ್ಜಿಕೊಂಡ. ರೆಪ್ಪೆಗಳನ್ನು ಮಿಟುಕಿಸದ. ಅತ್ತಿತ್ತ ನೋಡಿದ. ಸುತ್ತಲಿನ ಕಲ್ಲು, ಮಣ್ಣು ಹೊಲಗದ್ದೆ, ತಾನು ಎಲ್ಲ ಹಾಗೆ ಹಾಗೇ ಇದೆ. ಆದರೆ ಎದುರಿಗೆ ಶ್ರೀ ಚನ್ನಬಸವದೇವರನ್ನು ನೋಡಿದರೆ,

'ಮಗ ಕಾಶ್ಮೀರೀಚೇ ಸ್ವಯಂಭ। ಕಾ ರತ್ನಬೀಜಾ ನಿಘಾಲೇ ಕೋಂಭ। ಅವಯವ ಕಾಂತೀಚೇ ಭಾಂಬ। ತೈಸೀ ದಿಸೇ॥' ಜ್ಞಾನೇಶ್ವರೀ ೬-೨೫೩ ಮೂರ್ತಿಮಂತವಾದ ಸ್ಫಟಿಕವೋ-ರತ್ನಬೀಜಕ್ಕೆ ಒಡೆದ ಮೊಳಕೆಯೋ ಎಂಬಂತೆ ದೇಹದ ಅವಯುವಗಳ ಕಾಂತಿ ಕಾಣುತ್ತಲಿದೆ. 'ಇದೇನಪ್ಪ! ನಮ್ಮ ಚಂಬ ಇಷ್ಟು ಎತ್ತರವಾಗಿ, ಹೀಗೆಲ್ಲಾ ಕಾಣುತ್ತಿದ್ದಾನೆ', ಎಂದು ಅಂದುಕೊಳ್ಳುತ್ತ,ಭಯ-ಆಶ್ಚರ್ಯಗಳಿಂದ ಶ್ರೀ ಚನ್ನಬಸವದೇವರನ್ನು ಹಿಂಬಲಿಸಿದ್ದಾನೆ ಕಲ್ಲಪ್ಪ. ಸ್ವಲ್ಪ ಮುಂದೆ ಸಾಗಿದ್ದಾರೆ. ಎದುರಿಗೆ ಕೊಲೆಗೆ ನಿಯೋಜಿತ ವ್ಯಕ್ತಿ-ಹೆಸರು ಗಂಗಪ್ಪ-ಬರುತ್ತಿದ್ದಾನೆ. ನಮ್ಮ ಕಲ್ಲಪ್ಪನಿಗೆ ಹೆದರಿಕೆ ಇವನು ನನ್ನನ್ನೇ ಕೊಲ್ಲಲು ಹೊಂಚು ಹಾಕುತ್ತಿರುವನು ಎಂದು. ಇವನೇಕೆ ಎದುರಿಗೆ ಬಂದನೋ, ಚಂಬ ಬೇರೆ ಈ ರೀತಿ ಕಾಣಿಸುತ್ತಿದ್ದಾನೆ ಎಂದೆಲ್ಲ ಭಾವಿಸುತ್ತ, 'ಇವನ ಜೊತೆ ಮಾತನಾಡುತ್ತ ನಿಲ್ಲಬೇಡ, ನಡೆ ಹೋಗೋಣ' ಎಂದು ಶ್ರೀ ಚನ್ನಬಸವದೇವರಿಗೆ ಹೇಳುತ್ತ ಮುಂದಾದ. ಗಂಗಪ್ಪ ಎದುರಾದ. 'ನಮಸ್ಕಾರ ಸಾವ್ಕಾರರಿಗೆ' ಎಂದ. ಶ್ರೀ ಚನ್ನಬಸವದೇವರು 'ನಮಸ್ಕಾರ' ಎಂದರು. ಕಾಲುದಾರಿಯ ಎರಡೂ ಬದಿಗೆ

ಹೊಲಗದ್ದೆಗಳು, ಯಾವ ಮರವೂ ಹತ್ತಿರದಲ್ಲಿಲ್ಲ. ಸಮಯ ಸುಮಾರು ಮಧ್ಯಾಹ್ನ ೧:೩೦ ಘಂಟೆ. ಅವನು ಇವರಿಗೆ ಕುಳಿತುಕೊಳ್ಳಲು ತನ್ನ ಹೆಗಲ ಮೇಲಿನ ವಸ್ತ್ರವನ್ನು ಹಾಸಿದ. ಶ್ರೀ ಚನ್ನಬಸವದೇವರು ಹಾದಿಯ ಮೇಲೆ ಹಾಸಿದ ವಸ್ತ್ರದ ಮೇಲೆ ಕುಳಿತುಕೊಂಡರು. ಕಲ್ಲಪ್ಪನು ಸ್ವಲ್ಪ ದೂರ ಹೋಗಿ ಹಿಂತಿರುಗಿ ನೋಡಿದರೆ, ಇವರು ಮಾತಿಗೆ ತೊಡಗಿದ್ದಾರೆ. ಅಲ್ಲಿಂದಲೇ 'ಏ ಚಂಬ, ಬೇಗನೆ ಬಾ ಬಿಸಿಲಾಗುತ್ತಲಿದೆ', ಎಂದು ಕೂಗಿ ಹೇಳಿ ಮತ್ತೆ ಮುಂದೆ ನಡೆಯತೊಡಗಿದ. ಇವರಿಬ್ಬರೂ ಕುಳಿತು ಎಲೆ-ಅಡಿಕೆ ತಿಂದರು. ಗಂಗಪ್ಪ ಹೇಳಿದ 'ನಿಮ್ಮ ತಂದೆಯವರು ಕೂಗುತ್ತಿದ್ದಾರೆ, ನಡೆಯಿರಿ ಹೋಗೋಣ' ಎಂದು. ಸರಿ, ಇನ್ನು ಹೊರಡುವದು. ಅವನು ನಮಸ್ಕಾರ ಎಂದ. ಇವರೂ ಕಣ್ಣು ಮುಚ್ಚಿ ಕೈಮುಗಿದು ನಮಸ್ಕಾರ ಎನ್ನುತ್ತಿದ್ದಾರೆ. ಗೊತ್ತಿದೆ, ಎದುರಿಗೆ ಇರುವ ವ್ಯಕ್ತಿ ಕೊಲೆ ಮಾಡಲು ಸಮಯ ಕಾಯುತ್ತಿದ್ದಾನೆ ಎಂದು. ಆದರೆ ಸರ್ವರಲ್ಲೂ ತಮ್ಮ ಮಹತ್ ಇರುವಿಕೆಯನ್ನು ಅನುಭವಿಸುವ ಇವರಿಗೆ ಅವನಲ್ಲಿ ಭೇದವಿಲ್ಲ. ಅವನಿಗೆ ಇದೇ ಸಮಯ ಬೇಕಾಗಿತ್ತೋ ಏನೋ. ಕೈಯಲ್ಲಿಯೇ ಇದ್ದಿತು, ಸಜ್ಜುಗೊಳಿಸಿಕೊಂಡ ಹರಿತವಾದ ಕುಡುಗೋಲು.ಕಣ್ಣು ಮುಚ್ಚಿ, ಕೈಮುಗಿದು ನಿಂತ ಶ್ರೀ ಚನ್ನಬಸವದೇವರ ಹೊಕ್ಕಳು ಹತ್ತಿರ ಕುಡುಗೋಲು ಹಾಕಿ ಸುಮ್ಮನೆ ಹೊರಗೆಳೆದು ಬಿಟ್ಟ.

'ಹಾ' ಎಂಬ ಚೀತ್ಕಾರ ಹೊರಟಿತು.

(ಇಲ್ಲಿ ಶ್ರೀ ಚನ್ನಬಸವದೇವರ ಹೊಟ್ಟೆ ಹರಿದು ಕರಳುಗಳು ಹೊರಬಂದ ಸಮಯದಲ್ಲಿ, ಅಲ್ಲಿ ಬೆಳಗಾಂವಿಯಲ್ಲಿ, ಶ್ರೀ ನಿಲಜಕರರವರು ತಮ್ಮ ಮನೆಯಲ್ಲಿ 'ಜ್ಞಾನೇಶ್ವರೀ' ಓದುತ್ತ ಕುಳಿತಿದ್ದಾರೆ, ಕಿಟಕಿಯಲ್ಲಿಟ್ಟ ನೀರಿನ ಲೋಟವೊಂದು ಆಕಸ್ಮಾತಾಗಿ ಇವರ ಕಾಲುಬೆರಳ ಮೇಲೆ ಬಿದ್ದಿತು. ಬಿದ್ದದ್ದು ಸಮಾನ್ಯ ಚಿಕ್ಕ ಲೋಟ. ಆದರೆ ಆದದ್ದು ಅಸಾಮಾನ್ಯ ನೋವು. ಪ್ರಚಂಡ ನೋವು. ಅಸಹನೀಯ ವೇದನೆ, ಆಗ ಅವರು ಸಮಯ ನೋಡಿದರು. ನಂತರ ತಿಳಿದು ಬಂದಿತು, ಇಲ್ಲಿ ಈ ಘಟನೆ ನಡೆದದ್ದು ಅದೇ ಸಮಯದಲ್ಲಿ ಎಂಬುದು. 'ಶಂಭೂನಿ ಗಿಳಿಲೇ ಹಾಲಾಹಳ । ಮ್ಹಣೂನೀ ವಿಷ್ಣು ಝಾಲಾ ನೀಳ ॥ ನಾರಯಣೇ ಸೇವಿಲೇ ಅಮೃತ । ಮಹಾದೇವ ಝಾಲಾ ಶ್ವೇತ॥' ಸಮುದ್ರ ಮಂಥನ ಸಮಯದಲ್ಲಿ, ಉಕ್ಕಿ ಬಂದ ಹಾಲಾಹಲ ವಿಷವನ್ನು ಶಂಕರ ಕುಡಿದ. ಶಂಕರನನ್ನು ಧ್ಯಾನಿಸುತ್ತ ಭಾವತಾದಾತ್ಮ್ಯವನ್ನು ಹೊಂದಿದ್ದ, ವಿಷ್ಣುವಿನ ಮೈಬಣ್ಣ ನೀಳವರ್ಣವಾಯಿತು ವಿಷ್ಣು ಅಮೃತ ಕುಡಿದ. ವಿಷ್ಣುವನ್ನು ಧ್ಯಾನಿಸುತ್ತ ಭಾವತಾದಾತ್ಮ್ಯವನ್ನು ಹೊಂದಿದ್ದ ಶಂಕರನ ಮೈಬಣ್ಣ ಶ್ವೇತವರ್ಣವಾಯಿತು. ಇಲ್ಲಿ ರಾಮ ಮುಳ್ಳುತುಳಿದರೆ ಸಾಗರದಾಚೆ ಇರುವ ಸೀತೆ 'ಹಾ' ಎನ್ನುತ್ತಾಳೆ. ಈ ರೀತಿಯ ಭಾವತಾದಾತ್ಮ್ಯ ಶ್ರೀ ಚನ್ನಬಸವದೇವರು ಹಾಗೂ ಶ್ರೀ ನಿಲಜಕರರವರದು. ತ್ಯಾಂಚೀ ಯೊಂಚೀ ಏಕ ಗತಿ । ತ್ಯಾಂಚೀ ಯಾಂಚೀ ಏಕ ಸ್ಥಿತಿ । ತ್ಯಾಂಚೀ ಯಾಂಚೀ ಏಕ ಶಾಂತಿ। ಭೇದು ನಿಶ್ಚಿತಿ ಅಸೇನಾ॥ ಇಬ್ಬರ ಗತಿ ಒಂದೇ ಸ್ಥಿತಿ ಒಂದೇ ಶಾಂತಿ ಒಂದೇ ಭೇದವೆಂಬುದು ಇಲ್ಲವೇ ಇಲ್ಲ.)

ಒಂಬತ್ತು ಇಂಚು ಹೊಟ್ಟೆ ಹರಿದು ಕರಳುಗಳೆಲ್ಲ ಹೊರಬಿದ್ದವು 'ಹಾ' ಎಂಬ ಚೀತ್ಕಾರ ಹೊರಟಿತು. ಚೀತ್ಕಾರವನ್ನು ಕೇಳಿದ ಕಲ್ಲಪ್ಪ ಹಿಂದಿರುಗಿ ಓಡೋಡಿ ಬಂದ. ಈ ಚೀತ್ಕಾರ ಹೊರಟಿದ್ದು ಒಂದು ಕ್ಷಣ ಮಾತ್ರ. ಮರು ಕ್ಷಣದಲ್ಲಿ ಸಹಜ ಸ್ವಾಭಾವಿಕ ಪ್ರಸನ್ನತೆ, ಮುಖದಲ್ಲಿ ಅದೇ ಮುಗುಳು ನಗೆ. ಕಲ್ಲಪ್ಪನಿಗೆ "ಏನಿಲ್ಲ. ಆಗಬೇಕಾದ್ದೇ ಆಗಿದೆ, ಗಂಗಪ್ಪನದೇನೂ ತಪ್ಪಿಲ್ಲ, ನೀವು ಯಾರೂ ಅವನ ಮೇಲೆ ಸೇಡು ತೀರಿಸಿಕೊಳ್ಳುವ ಪ್ರಯತ್ನ ಮಾಡಬೇಡಿ" ಎಂದು ಪ್ರಶಾಂತವಾಗಿಯೇ ಹೇಳಿದರು. ಇರುವೆ ಕೂಡ ಕಡಿದಿಲ್ಲವೇನೋ ಎಂಬಂತೆ ಪ್ರಶಾಂತವಾಗಿದ್ದಾರೆ.

'ಮಗ ಮೇರು ಪಾಸೂನಿ ಥೋರೇ । ದೇಹ ದುಃಖಾಚೇನಿ ಡೋಂಗರೆ । ದಾಟಿಜೋ ಪಾ ಪರಿ ಭಾರೇ । ಚಿತ್ತ ನ ದಟೇ॥ ಕಾ ಶಸ್ತ್ರವರೀ ತೋಡಿಲಿಯಾ । ದೇಹ ಅಗ್ನಿಮಾಜೀ ಪಡಲಿಯಾ । ಚಿತ್ತ ಮಹಾಸುಖಿ ಪಹುಡಲಿಯಾ। ಚೇವೋಚಿ ನಯೇ॥' ಜ್ಞಾನೇಶ್ವರೀ ೬-೩೬೯,೩೭೦

ಮೇರುಪರ್ವತವನ್ನೂ ಮೀರಿಸುವಂತಹ ಬೃಹದಾಕಾರದ ದುಃಖವು ದೇಹವನ್ನು ಅಪ್ಪಳಿಸಿದರೂ ಆ ಮಹಾಮಹಿಮನ ಚಿತ್ತ ವಿಚಲಿತಗೊಳ್ಳದು. ಅಸ್ತ್ರಶಸ್ತ್ರಗಳಿಂದ ಆ ದೇಹವನ್ನು ಅಡ್ಡಡ್ಡವಾಗಿ ಕತ್ತರಿಸಿದರೂ ಸರಿಯೇ; ಅಗ್ನಿಯಲ್ಲಿ ಬೇಯಿಸಿದರೂ ಸರಿಯೇ. ಅಂತಃಸ್ಥಿತ ಸುಖಸಾಗರದಿ ಮುಳುಗಿ, ಮಲಗಿದ ಚಿತ್ತಕ್ಕೆ ಬಹಿರ್ಮುಖದ ಎಚ್ಚರ ಉಂಟಾಗಲಾರದು,

'ಆತ್ಮನಿ ಏವ ಪ್ರತ್ಯಗಾತ್ಮಸ್ವರೂಪೇ ಏವ ಆತ್ಮನಾ ಸ್ವೇನ ಏವ ಬಾಹ್ಯಲಾಭನಿರಪೇಕ್ಷಃ ತುಷ್ಟಃ; ಪರಮಾರ್ಥದರ್ಶನಾಮೃತರಸಲಾಭೇನ ಅನ್ಯಸ್ಮಾತ್ ಅಲಂ ಪ್ರತ್ಯಯವಾನ್; ಸ್ಥಿತಾ-ಪ್ರತಿಷ್ಠಿತಾ, ಪ್ರಜ್ಞಾ -ಅಹಮಸ್ಮಿ ಪರಂ ಬ್ರಹ್ಮ ಇತಿ ಆತ್ಮತತ್ತ್ವೇ ಸ್ಥಿತಃ ಶಸ್ತ್ರನಿಪಾತಾದಿಲಕ್ಷಣೇನ ಗುರುಣಾ ಮಹತಾ ಅಪಿ ದುಃಖೇನ ನ ವಿಚಾಲ್ಯತೆ'

ತನ್ನ ಅಂತರಾತ್ಮ ಸ್ವರೂಪದಲ್ಲಿಯೇ, ಹೊರಗಿನ ಯಾವುದೇ ಲಾಭದ ಅಪೇಕ್ಷೆ ಇಲ್ಲದೇನೇ ತನ್ನಲ್ಲಿ ತನ್ನಿಂದಲೇ ಸಂತೃಪ್ತನಾಗಿರುವ, ಪರಮಾರ್ಥ ದರ್ಶನರೂಪ ಅಮೃತರಸ ಪ್ರಾಪ್ತವಾಗಿರುವದರಿಂದ ಅನ್ಯದರಲ್ಲಿ 'ಅಲಂ' ಬುದ್ಧಿಯುಳ್ಳವನಾಗಿ ತೃಷ್ಣಾರಹಿತನಾದವ, 'ನಾನು ಪರಬ್ರಹ್ಮಸ್ವರೂಪವೇ ಆಗಿರುವೆ'ನೆಂದು ಪ್ರತಿಷ್ಠಿತ ಚಿತ್ತವುಳ್ಳವನು ಸ್ಥಿತಪ್ರಜ್ಞ. ಅವನು ಆತ್ಮತತ್ತ್ವದಲ್ಲೇ ಸ್ಥಿತನಾಗಿರುವದರಿಂದ; ತನ್ನ ನಿಜಸುಖದಲ್ಲಿ ಮತ್ತೆ ಮೇಲೆ ಏಳಲಾರದಂತೆ ಮುಳುಗಿರುವದರಿಂದ; ಶಸ್ತ್ರಾಘಾತ, ಪ್ರಳಯಾಗ್ನಿ ಮುಂತಾದ ದುಃಖಗಳು ಆತನನ್ನು ಆತನ ಸ್ವಯಂಸ್ಥಿತಿಯಿಂದ ವಿಚಲಿತಗೊಳಿಸಲಾರವು. ಆ ಸಾಮರ್ಥ್ಯ ಅವಕ್ಕಿಲ್ಲ. ಆದ್ದರಿಂದ ಶ್ರೀ ಚೆನ್ನಬಸವದೇವರು ಇರುವೆ ಕೂಡ ಕಡಿದಿಲ್ಲವೇನೋ ಎಂಬಂತೆ ಸಹಜ ಸ್ವಾಭಾವಿಕವಾಗಿ ಪ್ರಶಾಂತರಾಗಿಯೇ ಇದ್ದಾರೆ.

ಶಾಸ್ತ್ರ–ಪುರಾಣಗಳಲ್ಲಿ ನಾವು ಓದುತ್ತೇವೆ, ಕೇಳುತ್ತೇವೆ, ಹೇಳುತ್ತೇವೆ ; ಮುಕ್ತಪುರುಷ ಹಾಗಿರುತ್ತಾನೆ, ವಿದೇಹ ಅವಸ್ಥೆ ಹೀಗಿರುತ್ತದೆ ಎಂದು, ಮುಕ್ತಾತ್ಮನ ನಿಸ್ಸಂಗ ಇರುವಿಕೆಯನ್ನು ಕುರಿತು, ಸಾಕಷ್ಟು ಚರ್ಚೆಮಾಡುತ್ತೇವೆ, ತರ್ಕದ ಸಹಾಯದಿಂದ. ಆದರೆ ಇದಕ್ಕೆ ಪ್ರತ್ಯಕ್ಷ ಉದಾಹರಣೆ ಸಿಗುವದು ಅಪರೂಪ. 'ಐಸೇ ಜೇ ಮಹಾನುಭಾವ। ದೈವಿಯೇ ಪ್ರಕೃತೀಚೇ ದೈವ' ಜ್ಞಾನೇಶ್ವರೀ ೯–೧೫೪ ಇಂತಹ ಮಹಾಪುರುಷ ದೈವೀ ಪ್ರಕೃತಿಯ ಭಾಗ್ಯ ಎಂಬಂತೆ, ಅಧ್ಯಾತ್ಮ ಶಾಸ್ತ್ರದ ಭಾಗ್ಯ ಇಲ್ಲಿ ನಡೆಯುತ್ತಿರುವ ಈ ಘಟನೆ. ಮುಕ್ತ ಪುರುಷನು ದೇಹಾದಿ ಸಮಸ್ತ ಪ್ರಪಂಚದಿಂದ ನಿಸ್ಸಂಗವಾಗಿ ಸಾಕ್ಷಿಯಾಗಿದ್ದುಕೊಂಡು, 'ಹೇಗೆ ವರ್ತಿಸುತ್ತಾನೆ?'ಎಂದರೆ 'ಹೀಗೆ ವರ್ತಿಸುತ್ತಾನೆ' ಎಂದು ತೋರಿಸಲು ಶಾಸ್ತ್ರಕ್ಕೇ ಒಂದು ಆಧಾರ ಈ ಘಟನೆ. ಮುಂದೆ ಶ್ರೀಗಳವರು 'ಚಂಬ ನನಗೆ ನೆರವಾದ–ನನಗೆ ಸಹಾಯವಾದ' ಅಂತ ಆಗಾಗ ಹೇಳುತ್ತಿದ್ದರು. 'ನಾನು ತೋರುವ ಆತ್ಮತತ್ತ್ವ ಇಷ್ಟು ಸ್ಪಷ್ಟವಾಗಿದೆ ನೋಡಿಕೊಳ್ಳಿರಿ, ಎಂದು ತೋರಿಸಿಕೊಟ್ಟು ನನ್ನ ಕೆಲಸ ಹಗುರು ಮಾಡಿದ' ಎಂದು ಇದರ ಅಭಿಪ್ರಾಯ.

ಸುತ್ತ ಹೊಲದಲ್ಲಿ ಕೆಲಸ ಮಾಡುವ ಜನ ಓಡೋಡಿ ಬರತೊಡಗಿದ್ದಾರೆ. ಶ್ರೀ ಚನ್ನಬಸವದೇವರವರ ಸಹೋದರನು ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಇವರೇ ಸ್ವಾಮಿ ದಯಾನಂದ ಸರಸ್ವತಿ. ಇವರಿನ್ನೂ ಆಗ ಸಂನ್ಯಾಸ ಸ್ವೀಕರಿಸಿರಲಿಲ್ಲ. ಪೂರ್ವಾಶ್ರಮದಲ್ಲಿ ಇವರು ಶ್ರೀ ಚನ್ನಬಸವದೇವರ ಕಿರಿಯ ಸಹೋದರ–ಹೆಸರು ರುದ್ರಪ್ಪ. ಇವನೂ ಓಡಿ ಬಂದ. ಶ್ರೀ ಚನ್ನಬಸವದೇವರು ಯಾರಿಗೋ ಹೊರಬಿದ್ದ ಕರುಳುಗಳನ್ನು ಒಳಹಾಕಿ ಕಟ್ಟಲು ಹೇಳಿದರು. ಕುಳಿತುಕೊಳ್ಳಲು ಆಗುತ್ತಿಲ್ಲ. ಆಗ ರುದ್ರಪ್ಪನು ಕುಳಿತುಕೊಂಡು, ತಮ್ಮ ಬೆನ್ನನ್ನು ಆಸರೆಯಾಗಿ ಕೊಟ್ಟನು. ಅವನ ಬೆನ್ನಿಗೆ ಬೆನ್ನು ಹಚ್ಚಿ, ಶ್ರೀ ಚನ್ನಬಸವದೇವರು ಕುಳಿತುಕೊಂಡರು. ಜನ ಅಳತೊಡಗಿದ್ದಾರೆ. ಯಾರಿಗೂ ಅಳು ತಡೆಯಲಾಗುತ್ತಿಲ್ಲ.'ಅದನ್ನು ತೆಗೆದುಕೊಂಡು ಬಾ, ಇದನ್ನು ತೆಗೆದುಕೊಂಡು ಬಾ, ಹಾಗೆ ಮಾಡು, ಹೀಗೆ ಮಾಡು' ಎಂದು ಇವರನ್ನು ಆಸ್ಪತ್ರೆಗೆ ಸಾಗಿಸಲು ಓಡಾಡುತ್ತಿದ್ದಾರೆ. ಆಗ ಶ್ರೀ ಚನ್ನಬಸವದೇವರು "ನೋಡಿ, ಅಳುವಂತಹದು ಏನೂ ಆಗಿಲ್ಲ. ಈ ಶರೀರವನ್ನು ಬದುಕಿಸುವ ಪ್ರಯತ್ನ ಮಾಡಬೇಡಿ. ಯಾರೂ ಅಳುವದು, ಚೀರಾಡುವದನ್ನು ಮಾಡಬೇಡಿ. ನಾಮಸ್ಮರಣೆ ಮಾಡಿ, ನಿಮಗೆ ಅತ್ತರೇನೇ ಸಮಾಧಾನ ಆಗುತ್ತಿದ್ದರೆ, ಇಲ್ಲಿಂದ ದೂರ ಹೋಗಿ ಅತ್ತು ಬನ್ನಿ. ನಾಮಸ್ಮರಣೆ ಮಾಡುವವರು ಮಾತ್ರ ಇಲ್ಲಿ ಇರ್ರಿ."ಎಂದು ಹೇಳಿ ಕಣ್ಣುಮುಚ್ಚಿ 'ಓಂ ನಮಃ ಶಿವಾಯ' ಎಂಬ ಷಡಕ್ಷರಿ ಮಂತ್ರವನ್ನು ಉಚ್ಚರಿಸತೊಡಗಿದರು. ಜನರೂ ಅಳುನುಂಗಿ ನಾಮಸ್ಮರಣೆ ಮಾಡತೊಡಗಿದರು.

'ಸ್ಥಿತಿ ಬಾಣತಾ ಸ್ವರೂಪಾಚೀ।ಚಿಂತಾ ಸೋಡಿಲೀ ದೇಹಾಚೀ। ಯಾಕಾರಣೆ ಹೋಣಾರಾಚೀ। ಚಿಂತಾ ನಸೇ॥' ದಾಸಬೋಧ ೮–೯–೪೯.

ಸ್ವಸ್ವರೂಪದಲ್ಲಿ ಸಮರಸನಾದಾತ ದೇಹದ ಚಿಂತೆ ಬಿಟ್ಟಿರುತ್ತಾನೆ. ದೇಹದ ಆಗು-ಹೋಗುಗಳ ಕುರಿತು ತಟಸ್ಥನಾಗಿರುತ್ತಾನೆ. ಯಾವ ಕಾರ್ಯಕ್ಕಾಗಿ ಈ ಕಾಯ ಬಂದಿತ್ತೋ, ಅದನ್ನು ಸಾಧಿಸಿದ ಮೇಲೆ ಕಾಯ ಎಷ್ಟು ಕಾಲ ಇದ್ದರೇನು? ಅಥವಾ ಈಗಲೇ ಹೋದರೇನು?ಎಂದು, 'ದೇಹ ಆಮ್ಹಿ ಕೇಲಾ ಭೋಗಾಚೇ ಸಾಂಭಾಳೀ। ರಾಹಿಲೋ ನಿರಾಳೀ ಮಾನಾಮಾನಾ', ಎಂಬಂತೆ ಶರೀರವನ್ನು ಪ್ರಾರಬ್ಧಗತಿಗೆ ಒಪ್ಪಿಸಿ ನಿಶ್ಚಿಂತನಾಗಿರುತ್ತಾನೆ. ಅದರ ಪರಿಣಾಮ ಈಗ ಕಂಡುಬರುತ್ತಲಿದೆ.

'ಓಂ ನಮಃ ಶಿವಾಯ', 'ಓಂ ನಮಃ ಶಿವಾಯ' ನಾಮಸ್ಮರಣೆ ಮಾಡುತ್ತಿದ್ದಾರೆ. ಅಷ್ಟರಲ್ಲಿ ಅಲ್ಲಿಗೆ ತ್ಯಾಣಗೀ ಡಾಕ್ಟರ್ ಬಂದ. ಈತನು ಶ್ರೀ ಚನ್ನಬಸವದೇವರ ಬಾಲ್ಯ ಸ್ನೇಹಿತ. ಸ್ವತಃ ಪುಕ್ಕಲು-ಧೈರ್ಯ ಹೇಳಹೊರಟ ಶ್ರೀ ಚನ್ನಬಸವದೇವರಿಗೆ 'ಏ ಚಂಬಾ, ಏನಾಗಿಲ್ಲ, ಏನೂ ಆಗಿಲ್ಲ ಎಲ್ಲಾ ಆರಾಮಾಗತ್ಯೆತಿ' ಎಂದು ಹೇಳುತ್ತ, ಹೆದರುತ್ತಲೇ ನಾಡಿ ನೋಡಲು ಶ್ರೀ ಚನ್ನಬಸವದೇವರ ಕೈ ಹಿಡಿದ. ಆಗ ಶ್ರೀ ಚನ್ನಬಸವದೇವರು ನಗುತ್ತಲೇ ಏಕೆ? ಹೆದರಿರುವೆ ಎಂದು ತಿಳಿದಿರುವೆಯೇನು?' ಎಂದು ಕೇಳಿದರು. ಆವನು ಇಂಜೆಕ್ಷನ ಮಾಡಲು ಮುಂದಾದಾಗ ಬೇಡವೆಂದರು. ಮತ್ತೆ ನಾಮಸ್ಮರಣೆ ಮುಂದುವರೆಸಿದರು.

ಈ ಸುದ್ದಿ ಕಾದ್ರೊಳ್ಳಿ ಮಠಕ್ಕೆ ತಲುಪಿತು . ಶ್ರೀಗಳವರು ಹೊರಟುನಿಂತರು. ಮೋಟರ್‌ಸೈಕಲ್ ಮೇಲೆ ವಾಲಿಚಂಬಣ್ಣನನ್ನು ಮುಂದಕ್ಕೆ ಕಳುಹಿಸಿದರು. ಅವನು ಬಂದು ನೋಡುತ್ತಾನೆ, ಶ್ರೀ ಚನ್ನಬಸವದೇವರು ನೆಲದ ಮೇಲೆ ಕುಳಿತಿದ್ದಾರೆ. ಹೊಟ್ಟೆಗೆ ಕಟ್ಟಿದ ದೋತರ ರಕ್ತದಿಂದ ನೆನೆದು ಕೆಂಪಾಗಿದೆ, ರಕ್ತ ತೊಟ್ಟಿಕ್ಕುತ್ತಲೂ ಇದೆ. ಕಣ್ಣುಗಳು ಮುಚ್ಚಿವೆ. ವೃತ್ತಿ ತದಾಕಾರವಾಗಿದೆ. ನಾಮಸ್ಮರಣೆ ಮಾಡುತ್ತಿದ್ದಾರೆ.

'ಅಚಳ ಜಾಲೀ ಅಂತರ ಸ್ಥಿತೀ। ತೇಥೇ ಚಳನಾಸ ಕೈಚೀ ಗತೀ। ಸ್ವರೂಪೀ ಲಾಗತಾ ವೃತ್ತೀ।ಸ್ವರೂಪಚೀ ಜಾಲೀ।। ಸ್ವರೂಪೀ ಸ್ವರೂಪಚೀ ಜಾಲಾ।ಮಗ ತೋ ಪಡೋನಿಚ ರಾಹಿಲಾ। ಅಥವಾ ಉಠೋನಿ ಪಳಾಲಾ। ತರೀ ಚಳೇನಾ।।' ದಾಸಬೋಧ ೮-೯-೧೪,೧೬

ಅಚಲವಾಗಿದೆ ಅಂತಃಸ್ಥಿತಿ. ಚಲನೆಗೆ ಅಲ್ಲಿ ಎಲ್ಲಿದೆ ಗತಿ. ಸ್ವರೂಪದಿ ಕೂಡುತ್ತಲೇ ವೃತ್ತಿ-ಸ್ವರೂಪವಾಯಿತು. ಒಮ್ಮೆ ವೃತ್ತಿಯು ಸ್ವರೂಪದಲ್ಲಿ ಕೂಡಿ ವಿಲೀನವಾದಮೇಲೆ ಆ ದೇಹ ಬಿದ್ದಲ್ಲೇ ಬಿದ್ದಿದ್ದರೇನು? ಎದ್ದು ಓಡಿದರೇನು? ಅಂತಃಸ್ಥಿತಿಗೆ ಅಲುಗಾಟವಿಲ್ಲ.

ತದಾಕಾರವಾಗಿರುವ ಶ್ರೀ ಚನ್ನಬಸವದೇವರನ್ನು ವಾಲಿ ಚಂಬಣ್ಣನು ದೇಹಬುದ್ಧಿಯಿಂದಲೇ ನೋಡಿದ. ಈತ ಶ್ರೀ ಚನ್ನಬಸವದೇವರ ಸ್ನೇಹಿತ, ಸಂಬಂಧಿಕ, ಮೇಲಾಗಿ ಸತ್ಸಂಗಿ. ಹಿಂದೆ ಬಹಳಷ್ಟು ಸಾರಿ ಶ್ರೀ ಚನ್ನಬಸವದೇವರ ಜೊತೆಗೆ ಪಾರಮಾರ್ಥಿಕ

ಚರ್ಚೆ ಮಾಡಿದವ, ಜೊತೆಯಲ್ಲೇ ಶ್ರೀಗಳವರಿಂದ ಗೀತಾ ಶ್ರವಣ ಮಾಡಿದವ. ಅವನಿಗೆ ಶ್ರೀ ಚನ್ನಬಸವದೇವರು ರಕ್ತದ ಮಡುವಿನಲ್ಲಿ ಈ ರೀತಿ ಕುಳಿತದ್ದನ್ನು ನೋಡಿ ತಡೆಯಲಾಗಲಿಲ್ಲ. 'ಏನಾಯಿತೋ ಇದು' ಎಂದು ಗೋಳೋ ಅಂತ ಅಳಲಾರಂಭಿಸಿದ. ಶ್ರೀ ಚನ್ನಬಸವದೇವರು ಕಣ್ತೆರೆದು ಇವನ ಗೋಳಾಟವನ್ನು ನೋಡಿ ಹೇಳಿದರು.

"ಯಾಕ ಅಳಾಕ ಹತ್ತಿದೀ. ನಾ ಸಾಯ್ತೇನಿ ಅಂತ ತಿಳಿದೀ ಏನ. ಏನ್ ಕೇಳಿದಿಹಾ ಅಪ್ಪಾವರ ಕಡೆಯಿಂದ ಶಾಸ್ತ್ರ. ಆತ್ಮ ಹುಟ್ಟುವದಿಲ್ಲ ಸಾಯುವದಿಲ್ಲ ಅಂತ. ಈಗ ನಾ ಸಾಯ್ತೇನಿ ಅಂತ ತಿಳಕೊಂಡ ಅಳಾಕಹತ್ತಿದಿಯಲ್ಲಾ. ಮಲಮೂತ್ರದ ಗಡಿಗೆಯಿದು ಇದ ಸಾಯ್ತೇತಿ. ಮಣ್ಣಿನಿಂದ ಮಾಡಿದ ಗಡಿಗಿ ಮಣ್ಣಾಗ ಕೂಡತೈತಿ. ಹೋಗ, ಅಪ್ಪಗ ಹೇಳ, ನಿನ್ನ ಮಗಾ ಮುಕ್ತ ಆದ ಅಂತ"

ಸಂದೇಹ ರಹಿತ ಸಾಧನ। ತೇಚಿ ಸಿದ್ಧಾಚೇ ಲಕ್ಷಣ। ಅಂತರ್ಬಾಹ್ಯ ಸಮಾಧಾನ। ಚಳೇನಾ ಐಸೇ॥ ದಾಸಬೋಧ ೮-೯-೧೩

ಸಂದೇಹರಹಿತ ಸಾಧನ-ಅದುವೆ ಸಿದ್ಧನ ಲಕ್ಷಣ- ಅಂತರ್ಬಾಹ್ಯ ಸಮಾಧಾನ- ಅಲುಗನು ಅಳುಕನು ಎಂದೂ. ಸಿದ್ಧನ ಸಾಧನೆಯಲ್ಲಿ ಸಂದೇಹ ಸಂಶಯಗಳಿಗೆ ಸ್ಥಾನವಿಲ್ಲ. ಶಾಸ್ತ್ರ ಹೇಳುತ್ತದೆ ನೀನು ಅಮರ'ನೆಂದು. ಅದನ್ನು ಅನುಭವಿಸಿಯೇ ಸಿದ್ಧ. ಸಂದೇಹ ಸಂಶಯ ರಹಿತನಾಗಿ ಸಾಧನೆ ಕೈಗೊಳ್ಳುವದೇ ಸಿದ್ಧನ ಲಕ್ಷಣ. ಎಂದಿಗೂ ವಿಚಲಿತಗೊಳ್ಳದ ಸಮಾಧಾನ ಆತನನ್ನು ಅಂತರ್ಬಾಹ್ಯ ವ್ಯಾಪಿಸಿರುತ್ತದೆ. ತನ್ನ ಮುಕ್ತ ಸ್ಥಿತಿಯ ಬಗೆಗೆ ಇಲ್ಲಿ ಸಂಶಯವಿಲ್ಲ, ಅಭಿಮಾನವೂ ಇಲ್ಲ. "ಹೋಗು ಅಪ್ಪನಿಗೆ ಹೇಳು ನಿನ್ನ ಮಗ ಮುಕ್ತನಾದ" ಎಂದು ಶ್ರೀ ಚನ್ನಬಸವದೇವರು ದೃಢತೆಯಿಂದ ಹೇಳುತ್ತಿದ್ದಾರೆ.

ವಾಲಿ ಚಂಬಣ್ಣ ಸ್ವಲ್ಪ ಸುಧಾರಿಸಿಕೊಂಡ ಮತ್ತೆ ಅದೇ ಧಾಟಿಯಲ್ಲೇ ಕೇಳಿದ, 'ನಿನ್ನ ಹೆಂಡಿರು ಮಕ್ಕಳಿಗೆ ಏನಾದರೂ ಹೇಳುತ್ತೀಯೇನು?' ಶ್ರೀ ಚನ್ನಬಸವದೇವರು ಹೇಳಿದರು 'ದೇವರಿದ್ದಾನೆ, ಅವರನ್ನು ನೋಡಿಕೊಳ್ಳಲು'. ಶ್ರೀ ಚನ್ನಬಸವದೇವರು ವ್ಯಾಪಾರಸ್ಥರು ಲಕ್ಷಾಂತರ ರೂಪಾಯಿ ಬರಬೇಕಾಗಿದೆ ಬೇರೆಯವರಿಂದ; ಆದರೆ ವ್ಯವಹಾರವನ್ನು ಕುರಿತು ಒಂದು ಮಾತೂ ಇಲ್ಲ.

ಹಿಂದೆ ಎಷ್ಟೋ ಸಾರಿ ವಾಲಿ ಚಂಬಣ್ಣನು, ಶ್ರೀ ಚನ್ನಬಸವದೇವರು 'ಓಂ ನಮಃ ಶಿವಾಯ' ಎಂದು ಅನ್ನುವದನ್ನು ಕೇಳಿದ್ದ. ಆಗ ಆತ ಅಂದುಕೊಳ್ಳುತ್ತಿದ್ದ, "ಇದೇನು 'ಓಂ

ನಮಃ ಶಿವಾಯ', 'ಓಂ ನಮಃ ಶಿವಾಯ' ಅಂತ ಒಂದೇ ಸವನೆ ಅನ್ನುತ್ತಾನೆ'' ಅಂತ. ಆಗ ಆತನಿಗೆ ಇದು ಕೃತ್ರಿಮವಾಗಿ ಕಾಣುತ್ತಿತ್ತು. ಆದರೆ ಆ 'ಓಂ ನಮಃ ಶಿವಾಯ' ಎಂಬ ಮಂತ್ರ ಎಷ್ಟು ಆಳವಾಗಿ ಮೈಗೂಡಿತ್ತು ಎಂಬುವದು ಈಗ ಅರಿವಾಗಿತ್ತಲಿದೆ.

'ಜಯಾಂಚೇ ವಾಚೇಪುಡಾ ಭೋಜೇ। ನಾಮ ನಾಚಕ ಅಸೇ ಮಾರ್ಘೇ। ಜೇ ಜನ್ಮಸಹಸ್ರೀ ವ್ರೋಳಗೀಜೇ।ಏಕ ವೇಳ ಯಾವಯಾ॥' ಜ್ಞಾನೇಶ್ವರೀ ೯-೨೦೬ 'ತಯಾ ಅವ್ಯಂಗ ವಾಣೇಯಾ ಬ್ರಹ್ಮಾತೇ। ಪ್ರಯಾಣಕಾಲೇ ಪ್ರಾಪ್ತೇ। ಜೋ ಸ್ಥಿರಾವಲೇನಿ ಚಿತ್ತೇ। ಜಾನೋನೀ ಸ್ಮರೇ॥ ಜ್ಞಾನೇಶ್ವರೀ ೮-೯೧. ಭಗವಂತನು ಹೇಳುತ್ತಾನೆ, ನನ್ನ ನಾಮ ಒಂದೇ ಒಂದು ಸಾರಿ ಉಚ್ಚರಿಸಬೇಕೆಂದರೂ ಸಾವಿರಾರು ಜನ್ಮದ ಪುಣ್ಯ ಸಂಚಯ ಬೇಕಾಗುತ್ತದೆ, ಅಂತಹ ನನ್ನ ನಾಮವು ಇವನ ವಾಣಿಯು ಮುಂದೆ ಸತತ ನರ್ತಿಸುತ್ತಲಿರುತ್ತದೆ, ಮರಣಕಾಲ ಪ್ರಾಪ್ತವಾದಾಗಲೂ ಅದೇ ಸ್ಥಿರ ಅಂತಃಕರಣದಿಂದ ಪರಿಪೂರ್ಣ ಬ್ರಹ್ಮ, ತನ್ನ ಸ್ವರೂಪವೇ ಎಂದು ತಿಳಿದು ಸ್ಮರಿಸುತ್ತಲೇ ಇರುತ್ತಾನೆ. ಅರ್ಥಾತ್ ಯಾವ ಪ್ರಯತ್ನವಿಲ್ಲದೇನೇ ಸಹಜವಾಗಿ ತನ್ನ ನಿಜಸ್ಥಿತಿಯಲ್ಲಿ ನೆಲೆನಿಂತಿರುತ್ತಾನೆ ಎಂದು ಅರ್ಥ.

ತಯಾವರೀ ಜೈತರೇ ಜೈತ । ಮ್ಹಣೌನಿ ಧ್ಯಾನಾಚೇ ನಿಶಾಣ ವಾಜತ ।

ದಿಸೇ ತನ್ಮಯಾಚೇ ಝಳಕತ । ಏಕಚಕ್ರ ॥

ಆತ್ಮಾನುಭವ ರಾಜ್ಯಸುಖಾ ।

ಪಟ್ಟಾಭಿಷೇಕು ದೇಖಾ

'ಗೆದ್ದೆವೋ ಗೆದ್ದೆವೋ' ಎಂದು, ಗರ್ಜಿಸುತ್ತ ಬಾರಿಸುತ್ತ ಕುಣಿಯುತ್ತ, ಅಖಂಡ ಸಮರಸದ ಧ್ಯಾನವೆಂಬ ಧ್ವಜವನ್ನು ತನ್ಮಯತೆಯಿಂದ ಗತ್ತಿನಿಂದ ಹಾರಾಡಿಸುತ್ತ ಏಕಚಕ್ರಾಧಿಪತಿ, ಕಾಣಿಸಿಕೊಳ್ಳುತ್ತಿದ್ದಾನೆ. ಅದೋ ನೋಡಿ, ಅವನ ಆತ್ಮಾನುಭವ ರಾಜ್ಯಸುಖದ ಪಟ್ಟಾಭಿಷೇಕವನ್ನು.

'ಓಂ ನಮಃ ಶಿವಾಯ' 'ಓಂ ನಮಃ ಶಿವಾಯ' ನಡೆದಿದೆ ನಾಮಸ್ಮರಣೆ. ಧ್ವನಿ ಕ್ಷೀಣವಾಗತೊಡಗಿದೆ. ಕಣ್ಣುಗಳು ಮುಚ್ಚಿವೆ. ಅಷ್ಟರಲ್ಲಿ ಶ್ರೀಗಳವರು ಬಂದರು 'ಚಂಬಾ' ಎಂದು ಕರೆದರು. ಬಾಹ್ಯ ಪ್ರಜ್ಞೆ ಇಲ್ಲ. ಆದರೆ 'ಓಂ ನಮಃ ಶಿವಾಯ' ಎಂಬ ಮಂತ್ರ ಹೊರಡುತ್ತಲಿದೆ ಕ್ಷೀಣವಾಗಿ. ಶ್ರೀಗಳವರು ಶ್ರೀ ಚನ್ನಬಸವದೇವರ ತಲೆಯನ್ನು ಜೋರಾಗಿ ಹಿಂದಕ್ಕೆ ನೂಕಿ 'ಚಂಬಾ' ಎಂದು ಇನ್ನೊಮ್ಮೆ ಜೋರಾಗಿಯೇ ಕರೆದರು. ಕಣ್ಣುಗಳು ತೆರೆದವು. ಅಖಂಡ ಸಚ್ಚಿದಾನಂದ ಪರಬ್ರಹ್ಮವು ಘನೀಭೂತವಾಗಿ ಮೂರ್ತರೂಪತಳೆದು ಶ್ರೀಗಳವರ ರೂಪದಲ್ಲಿ ನಿಂತಿದ್ದನ್ನು ನೋಡಿದರು. ನಾಲ್ಕು ಕಣ್ಣುಗಳು ಒಂದಾದವು. ಮೌನವಾಗಿ ದಿಟ್ಟಿಸುವ

ಈ ಎರಡು ನೋಟಗಳ ನಡುವಿನ ಭಾವವಿನಿಮಯವನ್ನು ಅವರವರೇ ಬಲ್ಲರು. ಶ್ರೀಗಳವರು ಬರುವಾಗ ಮಾವಿನಹಣ್ಣು, ತೀರ್ಥ ತೆಗೆದುಕೊಂಡು ಬಂದಿದ್ದರು. ಶ್ರೀ ಚನ್ನಬಸವದೇವರನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಮಾವಿನಹಣ್ಣಿನ ಚೂರೊಂದನ್ನು ಬಾಯಿಗೆ ಇಟ್ಟರು. ಸ್ವಲ್ಪ ತೀರ್ಥವನ್ನು ಬಿಟ್ಟರು. ಶ್ರೀ ಚನ್ನಬಸವದೇವರು ಹಣ್ಣುತಿಂದು, ತೀರ್ಥ ನುಂಗಿ, ಇನ್ನೊಮ್ಮೆ ಗುರುಮೂರ್ತಿಯನ್ನು ದೀರ್ಘವಾಗಿ ನೋಡಿ ಕಣ್ಣುಮುಚ್ಚಿದರು, ಮತ್ತೆ ತೆರೆಯಲಿಲ್ಲ.

ಚಂಬ ಮುಕ್ತನಾದ ಎಂದು ಶ್ರೀಗಳು ಹೆಮ್ಮೆಯಿಂದ ಎದ್ದು ನಡೆದರು.

ದೇವೋ ನಾಚೇ ಸುಖೇ ಭುಲಲಾ। ಮ್ಹಣೇ ವಿಶ್ವಫಳಾ ಜಾಲಾ।

ಸಫಳಾ ಫಳಾ ಹಾ ಮಜ॥

ಜ್ಞಾನೇಶ್ವರೀ ೧೮–೧೫೭೬.

ಆನಂದದಿಂದ ಮೈಮರೆತ ಗುರುದೇವ ಕುಣಿಯತೊಡಗಿದ,

ವಿಶ್ವದಲ್ಲಿ ಶ್ರೇಷ್ಠ ಫಲ ಪ್ರಾಪ್ತಿಯೆಂದರೆ

ಇಂತಹ ಶಿಷ್ಯನನ್ನು ಪಡೆಯುವದು.

ಸುಮಾರು ಸಾಯಂಕಾಲದ ನಾಲ್ಕು ಘಂಟೆಯ ಸಮಯಕ್ಕೆ ಬೆಳಗಾವಿಯಲ್ಲಿ ಶ್ರೀ ನಿಲಜಕರರವರಿಗೆ 'ಚಂಬಣ್ಣನವರ ಕೊಲೆಯಾಯಿತು' ಎಂಬ ಸುದ್ದಿ ಮುಟ್ಟಿತು. ನಿಲಜಕರರವರಿಗೆ ಯಾವ ಆಘಾತವೂ ಇಲ್ಲ. ಕೂಡಿ ಕಲಿತವರು, ಕೂಡಿ ಆಡಿದವರು, ಕೂಡಿ ಗುರುದೇವನ ಪಾದದಲ್ಲಿ ಬಿದ್ದವರು. ಆದರೆ ಈಗ, 'ಚಂಬಣ್ಣನವರ ಕೊಲೆಯಾಯಿತು' ಎಂಬ ಸುದ್ದಿ ಅವರನ್ನು ಅಲುಗಾಡಿಸುತ್ತಿಲ್ಲ. ಇಬ್ಬರ ನಡುವಿನ ಸಂಬಂಧ ಅದು ಎಂತಹುದಿರಬಹುದು? ಹತ್ತಿರದಲ್ಲಿದ್ದ 'ಕಿಲ್ಲೇಕರ' ಎಂಬ ಸ್ನೇಹಿತನಿಗೆ ಅವರು ಹೇಳುತ್ತಾರೆ, 'ಇಂದಿನ ಈ ಘಟನೆ ಸಮಸ್ತ ಮುಮುಕ್ಷು ವೃಂದಕ್ಕೆ ಒಂದು ಮಾರ್ಗದರ್ಶನವಾಗುತ್ತದೆ. ಸಾಧನೆಗೆ ಒಂದು ಆಧಾರವಾಗುತ್ತದೆ.' ಎಂದು.

ಘಟನೆಯ ಸಮಸ್ತ ವಿವರವೇನೂ ಶ್ರೀ ನಿಲಜಕರರವರಿಗೆ ತಿಳಿದಿಲ್ಲ. ಆದರೆ ಶ್ರೀ ಚನ್ನಬಸವದೇವರನ್ನು ಒಳಹೊಕ್ಕು ನೋಡಿದ್ದರಿಂದ 'ಶ್ರೀ ಚನ್ನಬಸವದೇವರು ಆತ್ಮಭಾವದಲ್ಲೇ ನೆಲೆನಿಂತು, ಸಾಕ್ಷಿಯಾಗಿದ್ದುಕೊಂಡೇ ದೇಹವನ್ನು ಎಸೆಯುವರು' ಎಂಬ ದೃಢ ವಿಶ್ವಾಸವಿತ್ತು. ಏಕೆಂದರೆ ಶ್ರೀಗಳವರು ಇವರಿಬ್ಬರಿಗೂ ಕೂಡಿ ಇರಲು ಹೇಳಿದ್ದರು. ಇವರಿಬ್ಬರೂ ಈ ರೀತಿ ಕೂಡಿದ್ದರು.

'ಸಾಯುತ್ತೇನೆ' ಎಂದು ಅವನಿಗೆ ಅನ್ನಿಸಲಿಲ್ಲ.

'ಸತ್ತ'ನೆಂದು ಇವನಿಗೆ ಅನ್ನಿಸಲಿಲ್ಲ.

ನಂತರ ಶ್ರೀ ಚನ್ನಬಸವದೇವರ ಪಾರ್ಥಿವ ಶರೀರವನ್ನು ಹುಣಶೀಕಟ್ಟಿ ಗ್ರಾಮದಲ್ಲಿರುವ ಅವರ ಮನೆಗೆ ತರಲಾಯಿತು. ಕಾದ್ರೊಳ್ಳಿ ಮಠದಿಂದ ಆಗಮಿಸಿದ ಶರಣ ಬಳಗದವರು ರಾತ್ರಿ ಇಡೀ ಭಜನೆ ಮಾಡಿದರು. ಮರುದಿನ ಬೆಳಿಗ್ಗೆ ಸುಮಾರು ೧೦-೩೦ಕ್ಕೆ ಶ್ರೀ ಚನ್ನಬಸವದೇವರ ಪಾರ್ಥಿವ ಶರೀರಕ್ಕೆ, ರುದ್ರಸ್ವಾಮಿ ದೇವಸ್ಥಾನದ ಹತ್ತಿರ ಇರುವ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ಮಾಡಲಾಯಿತು. ಸಮಸ್ತ ಗುರು ಬಾಂಧವರು, ಬಂಧು ಬಾಂಧವರು ಎಲ್ಲರೂ ಅಂತ್ಯಸಂಸ್ಕಾರ ವಿಧಿಯಲ್ಲಿ ಪಾಲ್ಗೊಂಡಿದ್ದರು.

ಹೀಗೊಂದು ಜೀವನ ಮುಗಿಯಿತು.

ಮುಗಿಯಿತೆನ್ನೋಣವೇ ?

ಏನು ಮುಗಿಯಿತು?

ಆತ್ಮಕ್ಕೆ ಸಾವಿಲ್ಲ,

ಸಾವಿಲ್ಲದ್ದಕ್ಕೆ ಹುಟ್ಟಿಲ್ಲ,

ಹುಟ್ಟುಸಾವುಗಳ ಮಧ್ಯದಲ್ಲಿನ

ಜೀವನವೂ ಅದಕ್ಕಿಲ್ಲ.

ಯಃ ಸ ಸರ್ವೇಷು ಭೂತೇಷು

ನಶ್ಯತ್ಸು ನ ವಿನಶ್ಯತಿ

ಓಂ ಪೂರ್ಣಮದಃ ಪೂರ್ಣಮಿದಮ್

ಪೂರ್ಣಾತ್ಪೂರ್ಣಮುದಚ್ಯತೇ

ಪೂರ್ಣಸ್ಯ ಪೂರ್ಣಮಾದಾಯ

ಪೂರ್ಣಮೇವಾವಶಿಷ್ಯತೇ.

ಓಂ ಶಾಂತಿಃ ಶಾಂತಿಃ ಶಾಂತಿಃ.